# ಆರಂಭಿಕ ಭಾಷಾಕಲಿಕೆ ಮತ್ತು ಸಾಕ್ಷರತೆಗೆ ಸಹಾಯ ಮಾಡಲು ತರಗತಿ ಗ್ರಂಥಾಲಯದ ಸ್ಥಾಪನೆ

Early Literacy Initiative

Tata Institute of Social Sciences, Hyderabad

Practitioner Brief (17)

2019

Supported by

TATA TRUSTS

This Practitioner Brief is part of a series brought out by the Early Literacy Initiative anchored by the Azim Premji School of Education at the Tata Institute of Social Sciences, Hyderabad.

# *ಆರಂಭಿಕ ಭಾಷೆ ಮತ್ತು ಸಾಕ್ಷರತೆಗೆ ಸಹಾಯ ಮಾಡಲು ತರಗತಿ ಗ್ರಂಥಾಲಯದ ಸ್ಥಾಪನೆ*

> ನೀವು ಎಲ್ಲಿ ನೋಡಿದರೂ ಅಲ್ಲಿ ಮ್ಯಾಜಿಕ್ ಅನ್ನು ಕಾಣಬಹುದು .ಆರಾಮವಾಗಿ ವಿಶ್ರಾಂತಿ ಪಡೆಯಿರಿ, ನಿಮಗೆ ಬೇಕಾಗಿರುವುದು ಒಂದು ಪುಸ್ತಕ ಮಾತ್ರ.
>
> - ಡಾ .ಸೆಯುಸ್, ದಿ ಕ್ಯಾಟ್ ಇನ್ ದಿ ಹ್ಯಾಟ್.

## ಪರಿಚಯ

ಜತನದಿಂದ ಸಂಗ್ರಹಿಸಲಾದ ಉತ್ತಮ ಸಾಹಿತ್ಯವನ್ನು ಕೇವಲ ಒಂದು ಸವಲತ್ತು ಎಂದು ನೋಡಬಾರದು, ಬದಲಾಗಿ ಪ್ರತಿ ಮಗುವೂ ಸಾಕ್ಷರ ವ್ಯಕ್ತಿಯಾಗಿ ಬೆಳೆಯುವುದು ಅತ್ಯಗತ್ಯವಾಗಿದೆ ಎಂದು ಭಾವಿಸಬೇಕು. ಪ್ರತಿ ಮಗುವಿಗೂ ಉತ್ತಮ ಸಾಹಿತ್ಯ ವನ್ನು ಓದುವ ಹಕ್ಕಿದೆ. ಸಾಹಿತ್ಯವು ನಮ್ಮ ಜಗತ್ತಲ್ಲದ ಬೇರೊಂದು ಜಗತ್ತಿಗೆ ಕಿಟಕಿಗಳನ್ನು ತೆರೆಯುತ್ತದೆ; ನಮ್ಮದೇ ಜಗತ್ತಿನ ಮುಖಕ್ಕೆ ಕನ್ನಡಿ ಹಿಡಿಯುತ್ತದೆ; ಜೊತೆಗೆ ಒಂದು ಮಗುವು ಓದು-ಬರೆಹವನ್ನು ಹೇಗೆ ಕಲಿಯುತ್ತದೆ, ಸಾಹಿತ್ಯ ಪ್ರಪಂಚವನ್ನು ಅಥವಾ ಶಬ್ದಾರ್ಥ ಪ್ರಪಂಚವನ್ನು ಹೇಗೆ ಅನುಭವಿಸಿ ಅರ್ಥ ಮಾಡಿಕೊಳ್ಳುತ್ತದೆ ಎಂಬುದನ್ನು ಅರಿಯುವಲ್ಲಿ ಸಹ ಸಾಹಿತ್ಯದ ಪಾತ್ರ ಬಹಳ ಮಹತ್ವದ್ದು. (ಗಾಲ್ಡಾ, 1998),



*ಚಿತ್ರ ೧. ಜೀವಮಾನದ ಓದುಗರನ್ನು ತಯಾರು ಮಾಡಬಲ್ಲ ಒಂದು ಕ್ರಿಯಾಶೀಲ ಗ್ರಂಥಾಲಯ ಕಾಲದ ಹಾದಿಯಲ್ಲಿ ಬಹುದೂರ ಪಯಣಿಸುತ್ತದೆ.*

**Image courtesy**: Mridula Koshy, The Community Library Project.

ಮನೆಯಲ್ಲಿನ ಪುಸ್ತಕಗಳ ಕೊರತೆಯನ್ನು ಉತ್ತಮವಾಗಿ ಸಂಗ್ರಹವಾಗಿರುವ ಶಾಲಾ ಗ್ರಂಥಾಲಯಗಳು ಅಥವಾ ತರಗತಿಯ ಗ್ರಂಥಾಲಯಗಳು ಸರಿದೂಗಿಸಬಹುದು (ಮಿಲ್ಸ್, 2011). ಸ್ಟೀಫನ್ ಕ್ರಾಶೆನ್ ಅವರ ಪ್ರಕಾರ, ".. ಗ್ರಂಥಾಲಯದ ಪ್ರವೇಶ ಮತ್ತು ಬಳಕೆಯು ಉನ್ನತ ಪ್ರಾಥಮಿಕ ಶಾಲೆಯಲ್ಲಿ ಮತ್ತು

ಅದರಾಚೆಗಿನ ಹಂತಗಳಲ್ಲಿ ಓದುವಿಕೆಗಾಗಿ ಹೊರಹೊಮ್ಮಿದ ಒಂದು ನಿರಂತರ ಮುನ್ಸೂಚಕವಾಗಿದೆ. ತತ್ಪರಿಣಾಮವಾಗಿ ಸುಸ್ಥಿರ ಮೌನ ಓದುವಿಕೆ,ಸಾಮಾಜಿಕ-ಆರ್ಥಿಕ ಸ್ಥಿತಿಗತಿಗೆ ಮತ್ತು ಅಂತಿಮವಾಗಿ ಸೂಚನಾ ಓದುವಿಕೆಗೆ ದಾರಿಯಾಗುತ್ತದೆ" (ಕ್ರಾಶೆನ್, ಲೀ, ಮತ್ತು ಮೆಕ್‌ಕ್ವಿಲನ್, 2008, ಮಿಲ್ಸ್ 2011 ರಲ್ಲಿ ಉಲ್ಲೇಖಿಸಿದಂತೆ, ಪುಟ 54)

ಮಕ್ಕಳು ಮೂರು ರೀತಿಯ ಸಮರ್ಥವಾದ ಗ್ರಂಥಾಲಯಗಳನ್ನು ಬಳಸಬಹುದು – (ಸಮುದಾಯ ಗ್ರಂಥಾಲಯಗಳು) ಸಮುದಾಯದ ಎಲ್ಲ ಸದಸ್ಯರಿಗೆ ಇದು ಮುಕ್ತವಾಗಿದೆ; (ಶಾಲಾ ಗ್ರಂಥಾಲಯಗಳು )ಇದು ಇಡೀ ಶಾಲೆಗೆ ಸೇವೆ ಸಲ್ಲಿಸುತ್ತದೆ; ( ಮತ್ತು ತರಗತಿಯ ಗ್ರಂಥಾಲಯಗಳು ) ಇದನ್ನು ಆ ತರಗತಿಯ ವಿದ್ಯಾರ್ಥಿಗಳು ಮಾತ್ರ ಬಳಸುತ್ತಾರೆ .(ಈ ಭಾಗದಲ್ಲಿ ನಾವು ತರಗತಿಯ ಗ್ರಂಥಾಲಯದ ಪ್ರಾಮುಖ್ಯವನ್ನು ಮತ್ತು ಚಿಕ್ಕಮಕ್ಕಳನ್ನು ಭವಿಷ್ಯದಲ್ಲಿ ಉತ್ತಮ ಓದುಗರನ್ನಾಗಿ ಬೆಳೆಸುವಂತೆ ಮಾಡಲುಅದನ್ನು ಹೇಗೆ ರೂಪಿಸಬೇಕು ಎಂಬ , ಬಗ್ಗೆ ವಿವೇಚಿಸಲು ಪ್ರಯತ್ನಿಸುತ್ತೇವೆ.

ತರಗತಿಗಳಿಗೆ ತಮ್ಮದೇ ಆದ ಗ್ರಂಥಾಲಯಗಳು ಏಕೆ ಬೇಕು? ಶಾಲಾ ಗ್ರಂಥಾಲಯ ಸಾಕಾಗುವುದಿಲ್ಲವೇ? ಹೇಗೂ ವಿದ್ಯಾರ್ಥಿಗಳು ಗ್ರಂಥಾಲಯದ ಅವಧಿಯಲ್ಲಿ ಸಾಮಾನ್ಯವಾಗಿ ವಾರಕ್ಕೊಮ್ಮೆ ಶಾಲಾ ಗ್ರಂಥಾಲಯಕ್ಕೆ ಹೋಗಿಯೇ ಹೋಗುತ್ತಾರೆ. ಆದರೆ ತರಗತಿಯ ಗ್ರಂಥಾಲಯ ದಿನವಿಡೀ ತೆರೆದಿರುತ್ತದೆ. ಶಿಕ್ಷಕರು ಪಠ್ಯಕ್ರಮದ ವಿಸ್ತರಣೆಗಳನ್ನು ಯೋಜಿಸಬಹುದು, ರೀಡ್ ಅಲೌಡ್ (ಗಟ್ಟಿಯಾಗಿ ಓದುವ) ಚಟುವಟಿಕೆಗಳನ್ನು ಮಾಡಬಹುದು ಮತ್ತು ತರಗತಿಯೊಳಗಿನ ಈ ರೀತಿಯ ಸಂಪನ್ಮೂಲದೊಂದಿಗೆ ಸ್ವತಂತ್ರ ಓದುವ ಅಭ್ಯಾಸವನ್ನು ಪ್ರತಿದಿನ ಬೆಳೆಸಿಕೊಳ್ಳಲು ಮಕ್ಕಳನ್ನು ಪ್ರೋತ್ಸಾಹಿಸಬಹುದು.

ಇದಲ್ಲದೆ, ಶಾಲಾ ಗ್ರಂಥಾಲಯವು ವಿವಿಧ ವಯೋಮಾನದವರಿಗೆ (ಮಕ್ಕಳು ಹಾಗೂ ಸಿಬ್ಬಂದಿ), ವಿವಿಧ ಅಗತ್ಯ ಆಸಕ್ತಿಗಳಿಗೆ ಅನುಗುಣವಾಗಿ ಪುಸ್ತಕಗಳನ್ನು ಸಂಗ್ರಹಿಸುವಂತೆ ಸಂಗ್ರಹಿಸದೇ ತರಗತಿಯ ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಪುಸ್ತಕಗಳನ್ನು ಅತ್ಯಂತ ಜಾಗರೂಕತೆಯಿಂದ ಆರಿಸಲಾಗುತ್ತದೆ.

ಗ್ರಂಥಾಲಯವನ್ನು ರೂಪಿಸುವ ಕೆಲವು ಅಂಶಗಳು, ಈ ಹಿಂದೆ ತಿಳಿಸಲಾದ ಎಲ್ಲಾ ಮೂರು ರೀತಿಯ – ಸಮುದಾಯ, ಶಾಲೆ ಮತ್ತು ತರಗತಿ - ಗ್ರಂಥಾಲಯಗಳಿಗೂ ಸಮಾನವಾಗಿ ಅನ್ವಯವಾಗಬಹುದು. - ಆದಾಗ್ಯೂ ಈ ಭಾಗದಲ್ಲಿ ಕೊಟ್ಟಿರುವ ಸಲಹೆಗಳು ಕೊನೆಯ ವರ್ಗಕ್ಕೆ -_ತರಗತಿ ಗ್ರಂಥಾಲಯಕ್ಕೆ – ಅನ್ವಯಿಸುತ್ತವೆ.

ಈ ಟಿಪ್ಪಣಿಗಳನ್ನು ಭಾಷಾ ಬೋಧನೆಗೆ ಸಹಾಯ ಮಾಡಬಲ್ಲ ತರಗತಿ ಗ್ರಂಥಾಲಯವನ್ನು ಸ್ಥಾಪಿಸುವ ಆಸಕ್ತಿಯುಳ್ಳ ಶಿಕ್ಷಕರನ್ನು ಮತ್ತು ಅಂತಹ ಗ್ರಂಥಾಲಯವನ್ನು ಹೇಗೆ ಸ್ಥಾಪಿಸುವುದು ಎಂಬ ಬಗ್ಗೆ ಆಸಕ್ತಿ ಅಥವಾ ಕುತೂಹಲ ಹೊಂದಿರುವ ಇತರರನ್ನು ಗಮನದಲ್ಲಿ ಇರಿಸಿಕೊಂಡು ಸಿದ್ಧಪಡಿಸಲಾಗಿದೆ. ELI ಈ ಹಿಂದೆ ಗ್ರಂಥಾಲಯಗಳಲ್ಲಿ ನಡೆಸುವ ಚಟುವಟಿಕೆಗಳ[1] ಬಗ್ಗೆ ಪ್ರಯೋಗಾರ್ಥಿಗಳ ಟಿಪ್ಪಣಿಯ ಪ್ರಕಟಿಸಿದೆ; ಮತ್ತು ಆ ಟಿಪ್ಪಣಿಯನ್ನು ಸಹ ಇದರೊಂದಿಗೆ ಬಳಸಬಹುದು.

ನಾವು ಸಾಕ್ಷರರಾದ ಮಕ್ಕಳನ್ನು ಬೆಳೆಸುವ ಸರಳವಾದ ಮಾರ್ಗವೆಂದರೆ ಅವರಿಗೆ ಓದಲು ಕಲಿಸುವುದು ಮತ್ತು ಓದುವುದು ಒಂದು ಆಹ್ಲಾದಕರ ಚಟುವಟಿಕೆ ಎಂದು ಅವರಿಗೆ ತೋರಿಸುವುದು. ಇದರರ್ಥ, ಅವರು ಆನಂದಿಸುವ ಪುಸ್ತಕಗಳನ್ನು ಹುಡುಕುವುದು, ಅಂತಹ ಪುಸ್ತಕಗಳು ಅವರ ಕೈಗೆ ಸಿಗುವಂತೆ ಮಾಡುವುದು ಮತ್ತು ಅವುಗಳನ್ನು ಓದಲು ಅವಕಾಶ ಮಾಡಿಕೊಡುವುದು.

- ನೀಲ್ ಗೈಮನ್) 2013) ನಮ್ಮ ಭವಿಷ್ಯವು ಗ್ರಂಥಾಲಯಗಳ ಮೇಲೆ ಅವಲಂಬಿಸಿದೆ , ಓದುವಿಕೆ ಮತ್ತು ಹಗಲುಗನಸುಗಳು

ತರಗತಿಯ ಗ್ರಂಥಾಲಯವನ್ನು ಸ್ಥಾಪಿಸುವಾಗ ನಾವು ಯಾವ ಪ್ರಮುಖ ಅಂಶಗಳನ್ನು ನೆನಪಿನಲ್ಲಿರಿಸಿಕೊಳ್ಳುತ್ತೇವೆ? ತರಗತಿ ಗ್ರಂಥಾಲಯವನ್ನು ನಿರ್ವಹಿಸುವ ಓದುಗರು, ಸಂಗ್ರಹಣೆ, ಸಂವಹನ ಮತ್ತು ಸಾಗಾಣಿಕೆ ವಿಭಾಗಗಳಲ್ಲಿ, ನಾವು ಈ ಪ್ರತಿಯೊಂದು ಅಂಶಗಳನ್ನು ಚರ್ಚಿಸುತ್ತೇವೆ.

---

[1]See ELI's Practitioner Brief 3, "Promoting Language and Literacy Development through School Libraries" for more

## ಓದುಗರು

ನಮ್ಮ ವಿದ್ಯಾರ್ಥಿಗಳನ್ನು ಮತ್ತು ಎಲ್ಲಿಂದ ಬರುತ್ತಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ - ಅವರು ಮಾತನಾಡುವ ಭಾಷೆಗಳು, ಅವರ ಸಾಮಾಜಿಕ ಸಂದರ್ಭಗಳು, ಅವರ ಕಲಿಕೆಯ ಮಟ್ಟಗಳು ಮತ್ತು ಅಗತ್ಯಗಳನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.



ಚಿತ್ರ 2. ಪುಸ್ತಕದ ಪುಟಗಳನ್ನು ತಿರುಗಿಸುತ್ತಿರುವ ಚಿಕ್ಕ ಮಕ್ಕಳ ಗುಂಪು ಚಿತ್ರಕೃಪೆ :ಲಕ್ಷ್ಮಿ ಕರುಣಕರನ್, ಬುಗುರಿ ಸಮುದಾಯದ ಗ್ರಂಥಾಲಯ, ಬೆಂಗಳೂರು.

ಮಕ್ಕಳಿಗೆ ತಮ್ಮ ಓದಿಗಾಗಿ ಪರಿಚಿತ ಮತ್ತು ಹೊಸ, ಎರಡು ರೀತಿಯ ಪಠ್ಯದ ಅಗತ್ಯವಿದೆ. ನಾವು ಕೆಲವೊಮ್ಮೆ ಮಕ್ಕಳಿಗಾಗಿ ಸಂಗ್ರಹಗಳನ್ನು ಒಟ್ಟುಗೂಡಿಸುವಲ್ಲಿ ಈ ಎರಡೂ ಅತಿರೇಕಗಳಿಗೆ ಹೋಗುವುದೂ ಉಂಟು. ಹಣಕಾಸಿನ ಉತ್ತಮ ಅನುಕೂಲವುಳ್ಳ ದೇಶದ ಕೆಲವು ಖಾಸಗಿ ಗ್ರಂಥಾಲಯಗಳಲ್ಲಿ, ವಿಶೇಷವಾದ ಅಂತರರಾಷ್ಟ್ರೀಯ ಪುಸ್ತಕಗಳು, ಶೀರ್ಷಿಕೆಗಳು ಮತ್ತು ಲೇಖಕರ ಗ್ರಂಥಗಳ ನಾವು ನೋಡುತ್ತೇವೆ. ಅಂತಹ ಗ್ರಂಥಾಲಯಗಳಿಂದ ಪುಸ್ತಕಗಳನ್ನು ಎರವಲು ಪಡೆಯುವ ಮಕ್ಕಳು ಅಂತಹ ಪುಸ್ತಕಗಳಲ್ಲಿ ತಮ್ಮಂತಹ ಪಾತ್ರಗಳನ್ನು ನೋಡುವ ಸಾಧ್ಯತೆ ಇಲ್ಲ. ಅವರಿಗೆ ಸಂಪೂರ್ಣವಾಗಿ ಪರಿಚಯವಿಲ್ಲದರ ರಾಸ್ಪ್ಬೆರಿ ಪೈಗಳು ಮತ್ತು ನೀಲಿ ಕಣ್ಣಿನ ಸ್ನೇಹಿತರು, ಸಂಪೂರ್ಣವಾಗಿ ಅಪರಿಚಿತವಾದ ಸಂದರ್ಭಗಳು, ಪರಿಸರಗಳು ಮತ್ತು ನಡವಳಿಕೆಗಳನ್ನು ಓದಿಕೊಂಡೇ ಅವರು ಬೆಳೆಯಬಹುದು. ನೀವು ಓದುವ ಯಾವುದೇ ಪುಸ್ತಕ ನಿಮ್ಮನ್ನು ಅಥವಾ ನಿಮ್ಮ ಸುತ್ತಲಿನ ಪರಿಸರವನ್ನು ಪ್ರತಿಬಿಂಬಿಸದಿದ್ದಲ್ಲಿ ಅಂತಹ ಪುಸ್ತಕಗಳು ನೀವು, ನಿಮ್ಮ ಜನ ಅಥವಾ ನಿಮ್ಮ ಸಮಸ್ಯೆಗಳು ಇತರ ಜನಗಳಷ್ಟು ಮತ್ತು ಅವರು ಎದುರಿಸುತ್ತಿರುವ ಸಮಸ್ಯೆಗಳಷ್ಟು ಮುಖ್ಯವಲ್ಲ ಎಂಬ ಬಲವಾದ ಸಂದೇಶವನ್ನು ನಿಮಗೆ ರವಾನಿಸುತ್ತದೆ. ನೀವು ಓದುವ ಅಂತಹ ಪುಸ್ತಕಗಳೊಂದಿಗೆ ಒಂದು ಸಂಬಂಧ ಏರ್ಪಡಿಸಿಕೊಳ್ಳಲು, ಆ ಪುಸ್ತಕದಲ್ಲಿ ಏನು ನಡೆಯುತ್ತಿದೆಎಂಬುದನ್ನು ಅರ್ಥಮಾಡಿಕೊಳ್ಳಲು ಸಹ ನಿಮಗೆ ಕಷ್ಟಕರವಾಗುತ್ತದೆ.

ಇಲ್ಲಿ ಮತ್ತೊಂದು ಅತಿರೇಕಕ್ಕೆ ಹೋಗುವ ಅಪಾಯವಿದೆ. ಮೇಲೆ ವಿವರಿಸಲಾದ ಅಪಾಯಗಳನ್ನು ನಿವಾರಿಸಲು, ಕೆಲವು ಉತ್ತಮ-ಅರ್ಥಪೂರ್ಣ, ಪ್ರಗತಿಪರ ಶಾಲೆಗಳು ಮತ್ತು ಸಂಸ್ಥೆಗಳ ಗ್ರಂಥಾಲಯಗಳು ಓದುಗರನ್ನು ಮತ್ತು ಅವರ ಸನ್ನಿವೇಶವನ್ನು ಪ್ರತಿನಿಧಿಸಬಲ್ಲ ಪುಸ್ತಕಗಳನ್ನಷ್ಟೇ ಸಂಗ್ರಹಿಸಲು ಪ್ರಯತ್ನಿಸುತ್ತವೆ. ಹೊಸ ಓದುಗರಿಗೆ ಪರಿಚಿತವಾದುದು ಒಳ್ಳೆಯದು ಮತ್ತು ಅಪರಿಚಿತವಾದುದು ಅರ್ಥ ಮಾಡಿಕೊಳ್ಳಲು ಕಷ್ಟಕರವಾದುದು ಎಂಬುದು ಅವರ ಕಲ್ಪನೆಯಾಗಿರುತ್ತದೆ. ಆದರೆ ಪುಸ್ತಕಗಳ ಒಂದು ಪ್ರಮುಖ ಶಕ್ತಿ ಏನೆಂದರೆ, ಅವು ನಮ್ಮ ಸ್ವಂತ ಜೀವಂತ ವಾಸ್ತವತೆಗಳನ್ನು ಮೀರಿದ ವಿಚಾರಗಳಿಗೆ ನಮ್ಮನ್ನು ಕರೆದೊಯ್ಯುತ್ತವೆ - ಅವು ನಮ್ಮನ್ನು ಇತರ ಲೋಕಗಳಿಗೆ ಒಡ್ಡುತ್ತವೆ ಮತ್ತು ಪರಿಸರ ಅಪರಿಚಿತವೆಂದ ಮಾತ್ರಕ್ಕೆ ಸಮಸ್ಯೆಗಳು ಅಪರಿಚಿತ ಎಂದರ್ಥವಲ್ಲ. ಸ್ನೇಹ, ನಷ್ಟ ಮತ್ತು ಭರವಸೆಯಂತಹ ವಿಷಯಗಳು ಸಾಂಸ್ಕೃತಿಕ ಸಂದರ್ಭಗಳನ್ನು ಮೀರಿ ವಿಶ್ವಾತ್ಮಕ ಆಕರ್ಷಣೆಯನ್ನು

ಹೊಂದಬಹುದು

ಆದ್ದರಿಂದ, ನೀವು ನಿಮ್ಮ ಓದುಗರನ್ನು - ಅವರ ಬೆಳವಣಿಗೆಯ ಅಗತ್ಯಗಳನ್ನು , ಕಾಳಜಿಗಳನ್ನು ಮತ್ತು ಸಂದರ್ಭಗಳನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.– ಅವರನ್ನು ತಣಿಸುವ, ಹಾಗೆಯೇ ಅವರಿಗೆ ಸವಾಲೊಡ್ಡುವ ಎರಡೂ ಬಗೆಯ ವೈವಿಧ್ಯಮಯವಾದ ಪುಸ್ತಕಗಳನ್ನು ಸಮತೋಲಿತವಾದ ರೀತಿಯಲ್ಲಿ ಸಂಗ್ರಹಿಸಬೇಕಾಗುತ್ತದೆ. ಪುಸ್ತಕಗಳು ಕನ್ನಡಿಗಳ ಪಾತ್ರವನ್ನೂ ಹಾಗೆಯೇ ಕಿಟಕಿಗಳ ಪಾತ್ರವನ್ನೂ ನಿರ್ವಹಿಸುತ್ತವೆ – ಅವು ನಾವು ಯಾರೆಂದು ನಮಗೆ ತೋರಿಸುತ್ತವೆ , ನಾವು ಇನ್ನೂ ಅನುಭವಿಸದ ಇತರ ವಾಸ್ತವಗಳಿಗೆ ನಮ್ಮ ಮನಸ್ಸನ್ನು ತೆರೆದಿಡುತ್ತವೆ, ಇತರ ವಾಸ್ತವಗಳ ಅರಿವನ್ನು ಮತ್ತು ಅನುಭೂತಿಯನ್ನು ನಮ್ಮಲ್ಲಿ ಮೂಡಿಸುತ್ತವೆ (ಗಾಲ್ಡಾ, 1998).




*ಚಿತ್ರ 3.* ಗ್ರಂಥಾಲಯ ಸಂಗ್ರಹದಲ್ಲಿ ವೈವಿಧ್ಯತೆ ಅತ್ಯಗತ್ಯ .ಪುಸ್ತಕಗಳು ಕನ್ನಡಿ ಮತ್ತು ಕಿಟಕಿಗಳ ಪಾತ್ರವನ್ನು ನಿರ್ವಹಿಸುತ್ತವೆ .**ಚಿತ್ರಕೃಪೆ** :ಜಮುನಾ ಇನಾಮ್ದಾರ್, ಅರಿಪನಾ ಫೌಂಡೇಶನ್, ಬೆಂಗಳೂರು.

ವಿಭಿನ್ನ ಓದುವ ಹಂತದ ಪುಸ್ತಕಗಳ ಸಂಗ್ರಹ ಉಪಯುಕ್ತವಾಗಬಹುದು. ಪ್ರತಿಯೊಂದು ಮಗುವೂ ತನ್ನ ಓದುವ ಮಟ್ಟವನ್ನು ಲೆಕ್ಕಿಸದೆ ಅಂತಹ ಪುಸ್ತಕ ಸಂಗ್ರಹದೊಂದಿಗೆ ಅನುಸಂಧಾನ ನಡೆಸಬಹುದು.

**ಸಂಗ್ರಹ**

ಪ್ರಾಥಮಿಕ ತರಗತಿಯ ಗ್ರಂಥಾಲಯವು ತನ್ನ ಸಂಗ್ರಹದಲ್ಲಿ ಚಿತ್ರ ಪುಸ್ತಕಗಳು, ಅಧ್ಯಾಯ ಪುಸ್ತಕಗಳು) 2ನೇ ತರಗತಿಗೆ ಮೇಲ್ಪಟ್ಟು(, ಮಾಹಿತಿ ಪುಸ್ತಕಗಳು, ಜೊತೆಗೆ ಉಲ್ಲೇಖ ಪುಸ್ತಕಗಳು, ನಿಯತಕಾಲಿಕೆಗಳು, ಆಡಿಯೋ-ದೃಶ್ಯ ವಸ್ತುಗಳು, ಮಕ್ಕಳ ಪತ್ರಿಕೆಗಳು ಮತ್ತು ಮುಂತಾದವುಗಳನ್ನು ಹೊಂದಿರಬಹುದು. ವೈವಿಧ್ಯವೆಂಬುದು ಅತ್ಯಗತ್ಯ.

"ವೈವಿಧ್ಯ" ಎಂಬ ಪದವು ಸ್ವೀಕೃತಿ ಮತ್ತು ಗೌರವ ಎಂಬೆರಡೂ ಅರ್ಥಗಳನ್ನು ಒಳಗೊಳ್ಳುತ್ತದೆ . ಪ್ರತಿಯೊಬ್ಬ ವ್ಯಕ್ತಿಯೂ ವಿಶಿಷ್ಟ ಎಂಬುದನ್ನು ವೈವಿಧ್ಯವೆನ್ನುವರು. ವೈವಿಧ್ಯವು ಜನಾಂಗೀಯತೆ, ಲಿಂಗ, ಲೈಂಗಿಕ ದೃಷ್ಟಿಕೋನ, ಸಾಮಾಜಿಕ, ಆರ್ಥಿಕ ಸ್ಥಿತಿ, ವಯಸ್ಸು, ದೈಹಿಕ ಸಾಮರ್ಥ್ಯಗಳು, ಧರ್ಮ ಮತ್ತು ರಾಜಕೀಯ ನಂಬಿಕೆಗಳಿಗೆ ಸಂಬಂಧಿಸಿದ ವ್ಯಕ್ತಿಗತ ವ್ಯತ್ಯಾಸಗಳನ್ನು ಗುರುತಿಸಬಲ್ಲದು. ವೈವಿಧ್ಯವೆಂಬುದು ಗತಕಾಲದತ್ತ ಸರಿಯುವುದಾಗಿದೆ, ಸಹಿಷ್ಣುತೆಯಿಂದ ನಡೆದುಕೊಳ್ಳುವುದಾಗಿದೆ, ಪ್ರತಿಯೊಬ್ಬ ವ್ಯಕ್ತಿಯ ವಿಶಿಷ್ಟತೆಯನ್ನು ಸ್ವೀಕರಿಸಿ ಸಂಭ್ರಮಿಸುವುದಾಗಿದೆ. ಈ ವ್ಯತ್ಯಾಸಗಳ ಆವಿಷ್ಕಾರ ಮತ್ತು ಪರಿಶೋಧನೆ ಸಂಭವಿಸಬೇಕಾದ ಅತ್ಯಂತ ವಿಶ್ವಾಸಾರ್ಹ ವಾತಾವರಣವೆಂದು ಗ್ರಂಥಾಲಯಗಳನ್ನು ಬಹಳ ಹಿಂದಿನಿಂದಲೂ ಗುರುತಿಸಿಕೊಂಡು ಬರಲಾಗಿದೆ. " (ಒವರ್ಟನ್, 2016, ಪು. 2).

ಒವರ್ಟನ್‌ರ ಮಾತುಗಳು (ಮೇಲಿನ ಬಾಕ್ಸ್ ಬರೆಹವನ್ನು ನೋಡಿ) ವೈವಿಧ್ಯವೆಂಬುದು ಗ್ರಂಥಾಲಯಕ್ಕೆ ಅದೆಂತಹ ವರ್ಚಸ್ಸನ್ನು ಕೊಡುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ನೆರವಾಗುತ್ತದೆ.

ತರಗತಿಯ ಗ್ರಂಥಾಲಯದಲ್ಲಿ, ವಿವಿಧ ವಿಷಯಗಳು ಮತ್ತು ವಿಷಯ ವಸ್ತುಗಳ ಪುಸ್ತಕಗಳನ್ನು ಸಂಗ್ರಹಿಸಲು ನೀವು ಶ್ರಮಿಸಿದರೆ ಮಕ್ಕಳಿಗೆ ತಮ್ಮ ಜೀವನ ದೃಷ್ಟಿ ರೂಪಿಸಿಕೊಳ್ಳಲು ಸಹಾಯವಾಗುತ್ತದೆ. ಕ್ಯಾಚ್ ದ ಕ್ಯಾಟ್ [2], ಕನ್ನಾ ಪನ್ನಾ [3], ಕಾಳಿ ಮತ್ತು ಯಾರ್ಟ್ ಸ್ನೇಕ್ [4], ದಿ ವೈ ವೈ ಗರ್ಲ್ [5], ವಿಂಗ್ಸ್ ಟು ಫ್ಲೈ [6], ಮತ್ತು ಐ ಡೋಂಟ್ ಅಂಡಸ್ಟ್ಯಾಂಡ್ [7] ಇವೆಲ್ಲವೂ ವೈವಿಧ್ಯಮಯ ಶ್ರೇಣಿಯ ವಿಷಯಗಳನ್ನು ಹೊಂದಿರುವ ಪುಸ್ತಕಗಳಿಗೆ ಉದಾಹರಣೆಗಳಾಗಿವೆ.

ಉದಾಹರಣೆಗೆ, ಕ್ಯಾಚ್ ದಿ ಕ್ಯಾಟ್ ಮತ್ತು ಕನ್ನಾ ಪನ್ನಾ ಇವುಗಳಲ್ಲಿ ಅಂಗವೈಕಲ್ಯವನ್ನು ಸೂಕ್ಷ್ಮ ರೀತಿಯಲ್ಲಿ ನಿಭಾಯಿಸಲಾಗಿದೆ ಮತ್ತು ಅವನ್ನು ಓದಿದಾಗ ಗಾಲಿ ಕುರ್ಚಿಯ ಮೇಲೆ ಕುಳಿತಿರುವ ಅಥವಾ ದೃಷ್ಟಿವೈಕಲ್ಯವುಳ್ಳ ಮಗುವಿನ ಪ್ರತಿಭೆ ಈ ಸವಾಲುಗಳಿಂದಾಗಿ ಸೀಮಿತವಾಗಿಬಿಟ್ಟಿದೆ ಎಂದೆನಿಸುವುದಿಲ್ಲ. ಅವು ತಮ್ಮ ಪಾತ್ರಗಳನ್ನು ಸಂಭ್ರಮಿಸುವ ಕಥೆಗಳಾಗಿವೆ.ಆ ಕತೆಯಲ್ಲಿನ ಪಾತ್ರಗಳು ತಮಗೆ ಅಡ್ಡಿಯಾಗಿ ಬರುವ ಸವಾಲುಗಳಿಗೆ ಹಿಂಜರಿಯದೆ ದೃಢವಾಗಿ ಮುನ್ನಡೆದು ಹೇಗೆ ಸ್ವತಂತ್ರ ವ್ಯಕ್ತಿಗಳಾಗಿ ಮುಂದುವರಿಯುತ್ತಾರೆ ಎಂಬುದನ್ನು ನಮಗೆ ತೋರಿಸುತ್ತದೆ.

---

2 ವಿಶ್ವನಾಥ್, ಟಿ) .ಇಲ್ಲಸ್ಟ್ರೇಟರ್ :ನ್ಯಾನ್ಸಿ ರಾಜ್) .(2013).ಕ್ಯಾಚ್ ದಿ ಕ್ಯಾಟ್ . ಚೆನ್ನೈ :ತುಲಿಕಾ ಪಬ್ಲಿಷರ್ಸ್.

3 ವೈಟೇಕರ್, .ಡ್) .ಇಲ್ಲಸ್ಟ್ರೇಟರ್ :ನಿಲೌಫರ್ ವಾಡಿಯಾ) .(2015). ಕಣ್ಣ ಪನ್ನಾ .ಚೆನ್ನೈ :ತುಲಿಕಾ ಪಬ್ಲಿಷರ್ಸ್.

4 ವೈಟೇಕರ್, .ಡ್) .ಇಲ್ಲಸ್ಟ್ರೇಟರ್ :ಶ್ರೀವಿದ್ಯಾ ನಟರಾಜನ್) .(2005). ಕಳಿ ಮತ್ತು\ ಯಾರ್ಟ್ ಸ್ನೇಕ್ . ಚೆನ್ನೈ :ತುಲಿಕಾ ಪಬ್ಲಿಷರ್ಸ್.

5 ದೇವಿ, ಎಂ) .ಇಲ್ಲಸ್ಟ್ರೇಟರ್ :ಕನ್ಯಿಕಾ ಕಿನಿ) .(2012).ವೈ ವೈ ಗರ್ಲ್ . ಚೆನ್ನೈ :ತುಲಿಕಾ ಪಬ್ಲಿಷರ್ಸ್.

6 ರಾಜೇಂದ್ರನ್, ಎಸ್) .ಇಲ್ಲಸ್ಟ್ರೇಟರ್ :ಅರುಣ್ ಕೌಶಿಕ್) .(2006).ವಿಂಗ್ಸ್ ಟು ಫ್ಲೈ . ಚೆನ್ನೈ :ತುಲಿಕಾ

ಪಬ್ಲಿಷರ್ಸ್.
7 ಶ್ರೀನಿವಾಸನ್, ಎಂ) .ಇಲ್ಲಸ್ಟ್ರೇಟರ್ :ಶುಭಮ್ ಲಖೇರಾ) .(2018).ಐ ಡಿಂಟ್ ಅಂಡಸ್ಟ್ಯಾಂಡ್ .
ಚೆನ್ನೈ :ತುಲಿಕಾ ಪಬ್ಲಿಷರ್ಸ್.
ಈ ಎಲ್ಲಾ ಶೀರ್ಷಿಕೆಗಳು ಹಿಂದಿ, ತಮಿಳು, ಮಲಯಾಳಂ, ಕನ್ನಡ, ತೆಲುಗು, ಮರಾಠಿ, ಗುಜರಾತಿ ಮತ್ತು ಬಂಗಾಳಿ ಭಾಷೆಗಳಲ್ಲಿ ಲಭ್ಯವಿದೆ.

ಎಷ್ಟು ಸಂಖ್ಯೆಯ ಪುಸ್ತಕಗಳೊಂದಿಗೆ ತರಗತಿ ಗ್ರಂಥಾಲಯವನ್ನು ಪ್ರಾರಂಭಿಸಬೇಕಾಗಬಹುದು ಎಂದು ನೀವು ಯೋಚಿಸುತ್ತಿರಬಹುದು . ಇದು ಸರಿಯಾದ ಪ್ರಶ್ನೆ. ಏಕೆಂದರೆ ನಾವು ಕೆಲವೊಮ್ಮೆ ಸಂಪನ್ಮೂಲಗಳು ಕಡಿಮೆ ಇರುವಂತಹ, ಹೆಚ್ಚು ಸವಾಲಿನ ಸನ್ನಿವೇಶಗಳಲ್ಲಿ ಕೆಲಸ ಮಾಡುತ್ತೇವೆ. 1: 3ರ ಅನುಪಾತದಲ್ಲಿ ಪುಸ್ತಕಗಳನ್ನು ಹೊಂದಿಸುವ ಕೆಲಸ ಮಾಡಲು ಪ್ರಯತ್ನಿಸಿ - ನಿಮ್ಮ ತರಗತಿಯ ಪ್ರತಿ ಮಗುವಿಗೆ ಮೂರು ಉತ್ತಮ ಪುಸ್ತಕಗಳು ದೊರಕುವಂತೆ ನೋಡಿ . ಇದು ದೊಡ್ಡ ಸಂಖ್ಯೆಯಂತೆ ಕಾಣಿಸಬಹುದು. ನೀವು ಕೇಳಬಹುದು, ನನ್ನ ತರಗತಿಯಲ್ಲಿ 50 ಮಕ್ಕಳಿದ್ದರೆ - ಪ್ರಾರಂಭಿಸಲು ನನಗೆ 150 ಪುಸ್ತಕಗಳು ಬೇಕೇ? ಆದಾಗ್ಯೂ, ನೀವು ಪ್ರತಿ ಮಗುವಿಗೆ ಮೂರು ಪುಸ್ತಕಗಳೊಂದಿಗೆ ಪ್ರಾರಂಭಿಸುವುದು ಅನಿವಾರ್ಯವಲ್ಲ; ಸ್ವಲ್ಪ ಸಮಯ ತೆಗೆದುಕೊಳ್ಳಿ ಮತ್ತು ಈ ಅನುಪಾತವನ್ನು ಮುಟ್ಟಲು ಪ್ರಯತ್ನಿಸಿ.

ಒಂದು ಆಸಕ್ತಿದಾಯಕ ಬದಿಟಿಪ್ಪಣಿ: ಪಾಶ್ಚಾತ್ಯ ಸನ್ನಿವೇಶಗಳಲ್ಲಿ, ಫೌಂಟಾಸ್ ಮತ್ತು ಪಿನ್ನೆಲ್ (1996) ನಂತಹ ಶಿಕ್ಷಣತಜ್ಞರು ತರಗತಿಯ ಗ್ರಂಥಾಲಯಗಳಿಗಾಗಿ ಸುಮಾರು 300-600 ಪುಸ್ತಕಗಳ ಸಂಗ್ರಹವನ್ನು ಶಿಫಾರಸು ಮಾಡುತ್ತಾರೆ, ಇದು ಪ್ರತಿ ಶ್ರೇಣಿಯ ಹಂತ ಮತ್ತು ಪ್ರತಿಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಅವರ ಲೆಕ್ಕಾಚಾರದ ಪ್ರಕಾರ ಒಂದು ಶೈಕ್ಷಣಿಕ ವರ್ಷದಲ್ಲಿ ಮೊದಲನೇ ತರಗತಿ ವಿದ್ಯಾರ್ಥಿಗಳು ಸುಮಾರು 100-125 ಪುಸ್ತಕಗಳನ್ನು ಓದುವಂತೆ ಶಿಕ್ಷಕರು ನಿರೀಕ್ಷಿಸತಕ್ಕದ್ದು ಎಂದು ಅಂದಾಜಿಸಿದ್ದಾರೆ , ಮತ್ತು ದೊಡ್ಡ ಗಾತ್ರದ ಪುಸ್ತಕಗಳನ್ನು ಓದಬಲ್ಲ ದೊಡ್ಡ ಮಕ್ಕಳು ವರ್ಷಕ್ಕೆ 50-75 ಪುಸ್ತಕಗಳನ್ನು ಓದಬೇಕೆಂದು ನಿರೀಕ್ಷಿಸಬಹುದು (ನ್ಯೂಮನ್, 1999 ರಲ್ಲಿ ಉಲ್ಲೇಖಿಸಲಾಗಿದೆ). ಹೆಚ್ಚಿನ ಭಾರತೀಯ ತರಗತಿಗಳಲ್ಲಿ ನಾವು ಪ್ರಸ್ತುತ ಈ ರೀತಿಯ ನಿರೀಕ್ಷೆಗಳನ್ನು ಮಾಡಲು ಸಾಧ್ಯವಿಲ್ಲವಾದರೂ, ಲಭ್ಯವಿರುವ ಪುಸ್ತಕಗಳ ಸಂಖ್ಯೆಯನ್ನು ಗರಿಷ್ಠಗೊಳಿಸಲು ನಾವು ಖಂಡಿತವಾಗಿ ಪ್ರಯತ್ನಿಸಬಹುದು

ಸಂಗ್ರಹದ ಮತ್ತೊಂದು ಪ್ರಮುಖ ಅಂಶವೆಂದರೆ ಅದರ ***ಗುಣಮಟ್ಟ***. ಒಂದು ಉತ್ತಮ ಗ್ರಂಥಾಲಯವು ಕಳಪೆ ಗುಣಮಟ್ಟದ ಪುಸ್ತಕಗಳನ್ನು ಆಚೆಗಿಡಲು ಮತ್ತು ಉತ್ತಮ ಗುಣಮಟ್ಟದ ಪುಸ್ತಕಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತದೆ. ಆದರೆ ಮಕ್ಕಳ ಪುಸ್ತಕಗಳಲ್ಲಿ ಕಳಪೆ ಅಥವಾ ಉತ್ತಮ ಗುಣಮಟ್ಟದ ಪುಸ್ತಕಗಳು ಯಾವುವು? ಈ ವಿಷಯವನ್ನು ಸುದೀರ್ಘವಾಗಿ ಚರ್ಚಿಸುವುದು[9] ಈ ಟಿಪ್ಪಣಿಯ ವ್ಯಾಪ್ತಿಗೆ ಮೀರಿದ ಚರ್ಚೆಯಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಜನರನ್ನು ಅಥವಾ ಜನರ ಗುಂಪುಗಳನ್ನು ಹೊರಗಿಡುವ, ಅವರ ನಡುವೆ ತಾರತಮ್ಯವೆಸಗುವ, ಅವರನ್ನು ಸ್ಟೀರಿಯೊಟೈಪ್ ನಂತೆ ಕಾಣುವ ಪುಸ್ತಕಗಳನ್ನು ದೂರವಿಡಲು ಬಯಸುತ್ತೇವೆ. ವಿದ್ಯಾರ್ಥಿಗಳ ಬೆಳವಣಿಗೆಗೆ ಸೂಕ್ತವಲ್ಲದ ಅಥವಾ ಚರ್ಚಿಸಲು ಅರ್ಹವಲ್ಲದ ಪುಸ್ತಕಗಳನ್ನು ಹೊರಗಿಡುತ್ತೇವೆ. ಸಾಂಸ್ಕೃತಿಕವಾಗಿ-ಅಂತರವುಳ್ಳ ಆಯ್ಕೆಗಳನ್ನು ಸಂಪೂರ್ಣವಾಗಿ ಹೊರಗಿಡಲು ಸಾಧ್ಯವಾಗುವುದಿಲ್ಲ , ಆದರೆ ಸಾಂಸ್ಕೃತಿಕವಾಗಿ ಅಂತರವುಳ್ಳ ಹಾಗೂ ಅಂತರವಿಲ್ಲದ (ಅಥವಾ ಪರಿಚಿತವಾದ) ಆಯ್ಕೆಗಳ ಸಮತೋಲನ ಸಾಧಿಸಲು ಸಾಧ್ಯವಿದೆ.. ಕಥಾಹಂದರ, ಪಾತ್ರಗಳು, ಥೀಮ್‌ಗಳು, ಚರ್ಚಾಯೋಗ್ಯವಾದ ಪರಿಸರ ಹೊಂದಿರುವ ಪುಸ್ತಕಗಳನ್ನು ಅಥವಾ ಆಸಕ್ತಿದಾಯಕ ರೀತಿಯಲ್ಲಿ ಪಠ್ಯ ಮತ್ತು ವಿವರಣೆಯನ್ನು ಬಳಸುವ ಪುಸ್ತಕಗಳನ್ನು ಸೇರಿಸಲು ನಾವು ಪ್ರಯತ್ನಿಸುತ್ತೇವೆ. ಇದನ್ನು ಹೇಳಿದ ನಂತರ, ಒಂದು ನಿರ್ದಿಷ್ಟ ಭಾಷೆಯಲ್ಲಿ ಸಾಕಷ್ಟು ಉತ್ತಮ-ಗುಣಮಟ್ಟದ ಪುಸ್ತಕಗಳು ಲಭ್ಯವಿಲ್ಲದಿರಬಹುದು ಎಂದು ನಾವು ಅರ್ಥಮಾಡಿಕೊಂಡಿದ್ದೇವೆ. ನಮಗೆ ಪ್ರಸ್ತುತ ಇಂಗ್ಲಿಷ್‌ನಲ್ಲಿ ಗರಿಷ್ಠ ಆಯ್ಕೆ ಇದೆ, ಪ್ರಮುಖ ಪ್ರಾದೇಶಿಕ ಭಾಷೆಗಳಾದ ಮರಾಠಿ, ತೆಲುಗು ಮತ್ತು ಒರಿಯಾಗಳಲ್ಲಿ ಕಡಿಮೆ ಇದೆ , ಮತ್ತು ಬುಡಕಟ್ಟು ಭಾಷೆಗಳಲ್ಲಿ ಸಹ ಕಡಿಮೆ ಇದೆ .

[9] See National Council of Children's Literature's Guide to Good Books (YEAR) for an elaborate discussion of the idea of quality: http://eli.tiss.edu/wp-content/uploads/2017/08/Guide-to-Good-Books-1.pdf

ಅಂತಹ ಸನ್ನಿವೇಶದಲ್ಲಿ, ಸಂಗ್ರಹಕ್ಕಾಗಿ ಉತ್ತಮ-ಗುಣಮಟ್ಟದ ಪುಸ್ತಕಗಳ ಬಗ್ಗೆ ಮಾತನಾಡುವುದರಲ್ಲಿ ಯಾವ ಅರ್ಥವಿದೆ? ಫೀಲ್ಡ್ ನಲ್ಲಿ ಕೆಲಸ ಮಾಡುವ ಜನರು ಈ ಸಮಸ್ಯೆಗಳನ್ನು ತಪ್ಪಿಸಲು ನಮಗೆ ಸಲಹೆಗಳನ್ನು ನೀಡಿದರು:

- ಉನ್ನತ-ಗುಣಮಟ್ಟದ ಮಕ್ಕಳ ಸಾಹಿತ್ಯ ಸೀಮಿತ ಸಂಖ್ಯೆಯಲ್ಲಿದ್ದರೆ, ನಮ್ಮಲ್ಲಿ ಕನಿಷ್ಠ *ಸ್ವೀಕಾರಾರ್ಹ*-ಗುಣಮಟ್ಟದ ಪುಸ್ತಕಗಳಿವೆ ಎಂಬುದನ್ನು ನಾವು ಖಚಿತಪಡಿಸಿಕೊಳ್ಳಬೇಕು ಆಗ ಮಕ್ಕಳನ್ನು ತೊಡಗಿಸಿಕೊಳ್ಳಲು ನಮ್ಮಲ್ಲಿ ಸಾಕಷ್ಟು ಪುಸ್ತಕಗಳಿರುವಂತಾಗುತ್ತದೆ. ಎಲ್ಲಿಯವರೆಗೆ ನೀವು ನೈತಿಕ ಬಾಧ್ಯತೆಯ ಗೊಡವೆಯಿಲ್ಲದೇ ನಿರ್ವಹಿಸುತ್ತೀರೋ ಅಲ್ಲಿಯವರೆಗೂ ತೆನಾಲಿ ರಾಮ, ಪಂಚತಂತ್ರ ಅಥವಾ ಪೌರಾಣಿಕ ಕಥೆಗಳಂತಹ ಬುದ್ಧಿವಂತಿಕೆಯ, ಹಾಸ್ಯ ಸನ್ನಿವೇಶದ ಪುಸ್ತಕಗಳು ನಿಮ್ಮ ಸಂಗ್ರಹದ ಒಂದು ಭಾಗವಾಗಬಹುದು. ನಿಮ್ಮ ಮಕ್ಕಳೊಂದಿಗೆ ಅವರು ಓದಿದ (ಅಥವಾ ನೀವು ಅವರಿಗೆ ಓದಿದ್ದನ್ನು) ನೈತಿಕತೆಯ ಕಥೆಯ ಬಗ್ಗೆ ಅವರು ಏನು ಯೋಚಿಸುತ್ತಾರೆ ಎಂಬುದರ ಕುರಿತು ಆಗಾಗ್ಗೆ ಸಂಭಾಷಣೆ ಮಾಡುವುದರಿಂದ ಮಕ್ಕಳನ್ನು ಹೆಚ್ಚು ವಿಮರ್ಶಾತ್ಮಕವಾಗಿ ತೊಡಗಿಸಿಕೊಳ್ಳಲು ಸಹಾಯವಾಗುತ್ತದೆ.

- ನೀವು ಕೆಲವೇ ಆಯ್ಕೆಗಳನ್ನು ಹೊಂದಿದ್ದರೆ, ತರಗತಿಯಲ್ಲಿ ಪುಸ್ತಕಗಳನ್ನು ರಚಿಸುವ ಮೂಲಕ ನಿಮ್ಮ ಸಂಗ್ರಹಣೆಯನ್ನು ಹೆಚ್ಚಿಸುವ ಮಾರ್ಗಗಳ ಬಗ್ಗೆ ನೀವು ಯೋಚಿಸಬಹುದು, ಅಥವಾ ಕಡಿಮೆ ಆಯ್ಕೆಗಳೊಂದಿಗೆ ತೊಡಗಿಸಿಕೊಳ್ಳಲು ಸೃಜನಶೀಲ ಮಾರ್ಗಗಳನ್ನು ಕಂಡುಕೊಳ್ಳಬಹುದು.
- ಇತರ ಸ್ಥಳೀಯ ಭಾಷೆಗಳ ಪುಸ್ತಕಗಳನ್ನು ಸೇರಿಸಿಕೊಳ್ಳಬಹುದು - ಉದಾಹರಣೆಗೆ, ಬುಡಕಟ್ಟು ಭಾಷೆಯಲ್ಲಿ ಪುಸ್ತಕಗಳು ಲಭ್ಯವಿಲ್ಲದಿದ್ದರೆ ನೀವು ಪ್ರಾದೇಶಿಕ ಭಾಷೆಯಲ್ಲಿನ ಪುಸ್ತಕಗಳನ್ನು ಸೇರಿಸಬಹುದು ಮತ್ತು ಪ್ರಾದೇಶಿಕ ಭಾಷೆ ಕಲಿಯಲು ಮಕ್ಕಳಿಗೆ ಸಹಾಯ ಮಾಡಲು ಬಹುಭಾಷಾ ಪಠ್ಯಕ್ರಮವನ್ನು ಬಳಸಬಹುದು.

ಇವು ಆದರ್ಶಮಯ ಮೇಲ್ಪಂಕ್ತಿ ಅಲ್ಲದಿರಬಹುದು, ಆದಾಗ್ಯೂ ಬಹುಭಾಷಾ ಮಕ್ಕಳ ಸಾಹಿತ್ಯದ ಪೂರ್ಣ ಪ್ರಕಟಣೆಗಾಗಿ ಕಾಯುತ್ತಿರುವ ನಮಗೆ, , ಈ ಬಗೆಯ ತಂತ್ರಗಳಿಂದ ಅಲ್ಪಸ್ವಲ್ಪ ಸಹಾಯವಾಗುತ್ತವೆ. ಗಾತ್ರ ಮುಖ್ಯ, ನಿಜ. ಆದರೆ ಗುಣಮಟ್ಟದ ಬೆಲೆ ತೆತ್ತು ಗಾತ್ರ ವಿಸ್ತರಿಸಿಕೊಳ್ಳಬೇಕಾದ ಅಗತ್ಯವಿಲ್ಲ ಎಂಬುದನ್ನು ನಾವು ಮನಗಾಣಬೇಕು.

ಸಮಸ್ಯೆ ಇರುವುದು ನಿಮ್ಮ ಭಾಷೆಯಲ್ಲಿ ಸಾಕಷ್ಟು ಉತ್ತಮ-ಗುಣಮಟ್ಟದ ಪುಸ್ತಕಗಳು ಇಲ್ಲವೆಂಬುದರಲ್ಲಲ್ಲ, ಬದಲಾಗಿ ನಿಮ್ಮ ಬಳಿಇನ್ನೂ ಸಾಕಷ್ಟು ಉತ್ತಮವಾದ ಸಂಗ್ರಹವಿಲ್ಲ ಅಥವಾ ನಿಮ್ಮ ಸಂಸ್ಥೆಯು ಸಾಕಷ್ಟು ಉತ್ತಮ ಸಂಗ್ರಹವನ್ನು ಹೊಂದಿಲ್ಲ ಎಂಬುದಾಗಿದೆ ಎಂದು ಭಾವಿಸೋಣ. ಇದಕ್ಕೆ ಒಂದು ಪರಿಹಾರ ಮಾರ್ಗವೆಂದರೆ ಇತರ ಶಿಕ್ಷಕರೊಂದಿಗೆ ಒಗ್ಗೂಡಿ ಒಬ್ಬರಾದ ಮೇಲೆ ಒಬ್ಬರು ಸರದಿಯಂತೆ ಸಂಗ್ರಹವನ್ನು *ಹಂಚಿಕೊಳ್ಳುವುದು*. ಆರ್ಗನೈಸೇಶನ್ ಫಾರ್ ಅರ್ಲಿ ಲಿಟರಸಿ ಪ್ರಮೋಷನ್ (ಒಇಎಲ್ಪಿ) ನಂತಹ ಸಂಸ್ಥೆಗಳು ಹಲವಾರು ವರ್ಷಗಳಿಂದ ತರಗತಿಗಳಲ್ಲಿ ಪುಸ್ತಕಗಳನ್ನು ಬದಲಾಯಿಸಿಕೊಳ್ಳುವ ಈ ವ್ಯವಸ್ಥೆಯನ್ನು ಬಳಸುತ್ತಿವೆ.
ಪ್ರತಿ ತರಗತಿಯು ಒಮ್ಮೆಗೆ 20 ರಿಂದ 25 ಪುಸ್ತಕಗಳನ್ನು ಹೊಂದಿರುತ್ತದೆ, ಮತ್ತು ಪುಸ್ತಕಗಳ ಈ ಸಂಗ್ರಹವು ಪ್ರತಿ ತಿಂಗಳು ಬದಲಾಗುತ್ತಿರುತ್ತದೆ. ವರ್ಷಗಳುರುಳಿದಂತೆ ಅವರು ಏಕಲವ್ಯ , ಪರಾಗ್, ತುಲಿಕಾ ಪಬ್ಲಿಷರ್ಸ್ ಮತ್ತು ಪ್ರಥಮ್ ಬುಕ್ಸ್‌ನಂತಹ ವಿವಿಧ ಪ್ರಕಾಶಕರಿಂದ 18,000 ಕ್ಕೂ ಹೆಚ್ಚು ಪುಸ್ತಕಗಳನ್ನು (ಪ್ರತಿ ಶೀರ್ಷಿಕೆಯ ಕನಿಷ್ಠ 40 ಪ್ರತಿಗಳೊಂದಿಗೆ) ಜೊತೆಗೆ, ಇದಕ್ಕೆಂದೇ ಆಯ್ಕೆಮಾಡಲಾದ ಪುಸ್ತಕಗಳನ್ನುಳ್ಳ ದೊಡ್ಡ ಕೇಂದ್ರೀಕೃತ ಗ್ರಂಥಾಲಯವನ್ನು ನಿರ್ಮಿಸಿದ್ದಾರೆ. ವಿಶ್ವ ಪುಸ್ತಕ ಮೇಳದಿಂದ[11] ಜತನದಿಂದ ಆಯ್ಕೆ ಮಾಡಲಾದ ಪುಸ್ತಕಗಳನ್ನು ಸಹ ಇದು ಒಳಗೊಂಡಿದೆ.

[10] See: ELI's Practitioner Brief 7, "Children's Writing: Creating Books in the Classroom" for more details.

**ಸಂವಹನ**

ಒಂದು ಉತ್ತಮ ತರಗತಿ ಗ್ರಂಥಾಲಯವು ಅಷ್ಟೇನೂ ಉತ್ತಮವಲ್ಲದ ಗ್ರಂಥಾಲಯಕ್ಕಿಂತ ಹೇಗೆ ಭಿನ್ನ? ನಿಮ್ಮ ಬಳಿ ಎಲ್ಲ ಅಗತ್ಯ ಪುಸ್ತಕಗಳು ಮತ್ತು ಸಂಪನ್ಮೂಲಗಳಿದ್ದೂಮಕ್ಕಳನ್ನು ಅದರತ್ತ ಸೆಳೆಯಲಾಗದಿದ್ದರೆ ಏನು ಮಾಡಬೇಕು? ನಿಮ್ಮ ತರಗತಿಯಲ್ಲಿ ಓದುವಿಕೆಗೆ ನೀವು ವಿಶೇಷ ಸಮಯವನ್ನು ನಿಗದಿಪಡಿಸಿರಲಿ ಅಥವಾ ಭಾಷೆ ಬೋಧನಾ ಅಥವಾ ಇತರ ಬೋಧನಾ ಸಮಯವನ್ನು ಓದುವಿಕೆಗೆ ನಿಗದಿಪಡಿಸಿರಲಿ. ಇಡೀ ದಿನ ಮಕ್ಕಳು ಪುಸ್ತಕಗಳೊಂದಿಗೆ ಯಾವ ಬಗೆಯ ಸಂವಹನ ಹೊಂದಿರುತ್ತಾರೆ ಎಂಬುದನ್ನು ನೀವು ಪರಿಗಣಿಸಬೇಕಾಗುತ್ತದೆ .

ಈ ಪ್ರಶ್ನೆಗಳನ್ನು ನೀವೇ ಕೇಳಿಕೊಳ್ಳಿ:

- ಪ್ರದರ್ಶಿತವಾದ ಆಯ್ದ ಪುಸ್ತಕಗಳನ್ನು ನೋಡಲು ನೀವು ಎಷ್ಟು ಬಾರಿ ಮಕ್ಕಳನ್ನು ಪ್ರೋತ್ಸಾಹಿಸುತ್ತೀರಿ?
- ನಿಮ್ಮ ಅನುಮತಿಯಿಲ್ಲದೆ ಮಗುವಿಗೆ ಪುಸ್ತಕಗಳನ್ನು ಸ್ಪರ್ಶಿಸಲು ನೀವು ಅನುಮತಿಸುತ್ತೀರಾ?
- ಭಾಷೆಯ ಅವಧಿಯಲ್ಲಿ ಒಂದು ಮಗು ನಿಯೋಜಿಸಲಾದ ಕಾರ್ಯದಿಂದ ವಿಮುಖನಾಗಿ ಪುಸ್ತಕವನ್ನು ನೋಡುತ್ತಿದ್ದರೆ ಅದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?
- ಬ್ರೌಸಿಂಗ್ ಸಮಯವನ್ನು ಗೊತ್ತುಪಡಿಸಿದ ಸಮಯಕ್ಕೆ ನಿರ್ಬಂಧಿಸುತ್ತೀರಾ?
- ಒಂದು ಮಗು ಪುಸ್ತಕದಿಂದ ಪುಟವನ್ನು ಹರಿದರೆ ಅಥವಾ ಪುಸ್ತಕದ ಮೇಲೆ ಏನಾದರೂ ಗೀಚಿದರೆ ನೀವು ಹೇಗೆ ಪ್ರತಿಕ್ರಿಯಿಸುತ್ತೀರಿ?
- ಮಗುವಿಗೆ ಪುಸ್ತಕವನ್ನು ಮನೆಗೆ ತೆಗೆದುಕೊಂಡು ಹೋಗಲು ನೀವು ಅನುಮತಿಸುತ್ತೀರಾ?
- ತರಗತಿಯಲ್ಲಿ ಪುಸ್ತಕಗಳನ್ನು ಬಳಸುವ ನಿಯಮಗಳು ಹೇಗಿರಬಹುದು? ಈ ನಿಯಮಗಳನ್ನು ನಿಗದಿಪಡಿಸುವಾಗ ಮಕ್ಕಳು ಅದರ ಚರ್ಚೆಯ ಭಾಗವಾಗಬೇಕೆಂದು ನೀವು ಭಾವಿಸುತ್ತೀರಾ?
- ನಿಮ್ಮ ಮಕ್ಕಳು ಪುಸ್ತಕಗಳನ್ನು ತೆಗೆದುಕೊಳ್ಳಲು ಹಿಂಜರಿಯುತ್ತಾರೆಯೇ ಮತ್ತು ಪರಿಸರವು ಸಾಧ್ಯವಾದಷ್ಟು ಅಪಾಯಕಾರಿ ಅಲ್ಲವೆಂದು ನೀವು ಭಾವಿಸುತ್ತೀರಾ?

ಈ ಪ್ರಶ್ನೆಗಳಿಗೆ ನೀವು ಹೇಗೆ ಉತ್ತರಿಸುತ್ತೀರಿ ಎಂಬುದು ನಿಮ್ಮ ವಿದ್ಯಾರ್ಥಿಗಳು ನಿಮ್ಮ ತರಗತಿಯ ಪುಸ್ತಕಗಳೊಂದಿಗೆ ನಡೆಸುವ ಸಂವಾದದ ಸ್ವರೂಪವನ್ನು ಸೂಚಿಸುತ್ತದೆ. ನಿಯಮಗಳನ್ನು ನಿಗದಿಪಡಿಸುವ ಪ್ರಕ್ರಿಯೆಯು ಡೆಮಾಕ್ರಟಿಕ್ ಆಗಿದ್ದಷ್ಟೂ, ಪುಸ್ತಕಗಳ ವಿಷಯದಲ್ಲಿ ಮಕ್ಕಳ ಭಯ ಕಡಿಮೆಯಾಗುತ್ತದೆ. ಅವರಿಗೆ ಹೆಚ್ಚು ಜವಾಬ್ದಾರಿ ನೀಡಿದಷ್ಟೂ, ಪುಸ್ತಕಗಳನ್ನು ಪಡೆಯಲು ಹೆಚ್ಚು ಸ್ವಾತಂತ್ರ್ಯ ನೀಡಿದಷ್ಟೂ ಆರೋಗ್ಯಕರ ಚರ್ಚೆ ಸಾಧ್ಯವಾಗುತ್ತದೆ.

[11] For more details, visit: http://nbtindia.gov.in/nbtbook and http://nbtindia.gov.in/nbtbook/Client/InnerPage/16history-of-ndwbf_ndwbf

ನಿಮ್ಮ ತರಗತಿಯಲ್ಲಿನ ಸಂವಹನಗಳ ಗುಣಮಟ್ಟವನ್ನು ನಿರ್ಧರಿಸಲು- ಮಕ್ಕಳಿಗೆ ಪುಸ್ತಕಗಳನ್ನು ನಿರ್ವಹಿಸಲು ಪ್ರೋತ್ಸಾಹಿಸುವುದು - ಮತ್ತು ಕಾಲಾನಂತರದಲ್ಲಿ, ಅವುಗಳನ್ನು ಜಾಗರೂಕತೆಯಿಂದ ನೋಡಿಕೊಳ್ಳುವುದು ಬಹಳ ಮುಖ್ಯ. ಈಗ ನಿಮ್ಮ ವಿದ್ಯಾರ್ಥಿಗಳನ್ನು ಪುಸ್ತಕ ಸಂಗ್ರಹದೊಂದಿಗೆ ಇನ್ನೂ ಹೆಚ್ಚು ಆಪ್ತವಾದ ಸಂಬಂಧ ಏರ್ಪಡಿಸಿಕೊಳ್ಳುವಂತೆ ಮಾಡುವುದು ಹೇಗೆ ಎಂಬುದರ ಕುರಿತು ವಿವೇಚಿಸೋಣ.. ಈ ಮೊದಲೇ ಹೇಳಿದಂತೆ, ಪುಸ್ತಕಗಳೊಂದಿಗಿನ ಉತ್ತಮ ಗುಣಮಟ್ಟದ ಸಂವಾದಗಳನ್ನು ಬೆಂಬಲಿಸಲು ನೀವು ಬಳಸಬಹುದಾದ ಚಟುವಟಿಕೆಗಳ ಬಗ್ಗೆ ELIನಲ್ಲಿ ಒಂದು ಟಿಪ್ಪಣಿಯಿದೆಅಲ್ಲದೆ, *ಭಾರತೀಯ ತರಗತಿ ಕೋಣೆಗಳಲ್ಲಿನ ಸಮಗ್ರ ಸಾಕ್ಷರತಾ ಮಾದರಿಯ(ಕಾಂಪ್ರಹೆನ್ಸಿವ್ ಲಿಟರರಿ ಇನ್‌ಸ್ಟ್ರಕ್ಷನ್ ಮಾಡೆಲ್ ಇನ್ ಇಂಡಿಯನ್ ಕ್ಲಾಸ್‌ರೂಮ್ಸ್)* ಕುರಿತು ನಮ್ಮ ಟಿಪ್ಪಣಿಯನ್ನು ನೀವು ಓದಬೇಕೆಂದು ನಾವು ಶಿಫಾರಸು ಮಾಡುತ್ತೇವೆ, ಈ ಲೇಖನದಲ್ಲಿ ನಾವು ದೈನಂದಿನ ಭಾಷೆ ಮತ್ತು ಸಾಕ್ಷರತೆಯ ಬೋಧನೆಗೆ ,90 ನಿಮಿಷಗಳ ಸಮಯವನ್ನು ಪರಿಣಾಮಕಾರಿಯಾಗಿ ಬಳಸಬಹುದು ಎಂಬ ವಿಚಾರಗಳನ್ನು ಸೂಚಿಸುತ್ತೇವೆ .

ತರಗತಿಯಲ್ಲಿ ಸಮಗ್ರ ಸಾಕ್ಷರತೆಯನ್ನು ಬೆಂಬಲಿಸುವಲ್ಲಿ ತರಗತಿಯ ಗ್ರಂಥಾಲಯವು ಅಮೂಲ್ಯವಾದ ಸಂಪನ್ಮೂಲವಾಗಿದೆ .ನೀವು ನಿಮ್ಮ ಸಂಗ್ರಹದಿಂದ ಸೂಕ್ತ ಪುಸ್ತಕಗಳನ್ನು ಪ್ರತಿದಿನ 30 ನಿಮಿಷಗಳ ಕಾಲ ಓದುವ ಸ್ಲಾಟ್‌ಗೆ ಮೀಸಲಿಡ ಬಹುದಾದರೆ, ಅದರಿಂದಅರ್ಥ ಗ್ರಹಿಕೆ, ಮೌಖಿಕ ಭಾಷೆಯ ಅಭಿವೃದ್ಧಿ, ಶಬ್ದಕೋಶ ಅಭಿವೃದ್ಧಿ, ಸಾಹಿತ್ಯಪ್ರೀತಿ, ವಿಮರ್ಶಾತ್ಮಕ ಓದುವಿಕೆ ಮತ್ತು ಬರವಣಿಗೆಗೆ ಸಹಾಯವಾಗುತ್ತದೆ . ಜೊತೆಗೂಡಿ ಓದುವುದು, ಮಾರ್ಗದರ್ಶನದೊಂದಿಗೆ ಓದುವುದು, ಸ್ವತಂತ್ರವಾಗಿ ಓದುವುದು ಮುಂತಾದ ಚಟುವಟಿಕೆಗಳಿಗೆ ಸಹ ನೀವು ಪುಸ್ತಕಗಳನ್ನು ಬಳಸಬಹುದು.

**ತರಗತಿ ಗ್ರಂಥಾಲಯದ ನಿರ್ವಹಣಾ ತಂತ್ರ (ಲಾಜಿಸ್ಟಿಕ್ಸ್)**

**ಸ್ಥಳ: ತರಗತಿಯಲ್ಲಿ** ಗ್ರಂಥಾಲಯವನ್ನು ಸ್ಥಾಪಿಸಲು ತರಗತಿಯೊಳಗೆ ಯೋಗ್ಯವಾದ ಸ್ಥಳವನ್ನು ಹೊಂದಿರಬೇಕಾದುದು ಅತ್ಯಗತ್ಯ. ಮಕ್ಕಳಿಗೆ ಒಳ್ಳೆಯ ಗಾಳಿ ಬೆಳಕಿರುವ ಒಂದು ಪ್ರಶಸ್ತವಾದ ಸ್ಥಳ ಬೇಕು. ಆದರೆ ನಿಮ್ಮ ತರಗತಿಯಲ್ಲಿ ಸ್ಥಳವೇ ಒಂದು ಐಷಾರಾಮಿ ಸಂಗತಿಯಾಗಿದ್ದು ಪುಸ್ತಕಗಳಿಗಾಗಿ ಒಂದು ಮೂಲೆಯನ್ನು ಮೀಸಲಿಡಲು ನಿಮಗೆ ಸಾಧ್ಯವಾಗದಿದ್ದರೆ ಏನು ಮಾಡುವುದು ?

ಅಚ್ಚುಕಟ್ಟಾದ ಓದುವ ಸ್ಥಳವನ್ನು ಮಾಡಲು ಹಲವು ಮಾರ್ಗಗಳಿವೆ.

- ಬುಡಕಟ್ಟು ಜನಾಂಗದ ಜೊತೆ ಮಹಾರಾಷ್ಟ್ರದಲ್ಲಿ ಸಂಪನ್ಮೂಲಗಳ ಕೊರತೆಯುಳ್ಳ ತರಗತಿಗಳಿಗಾಗಿ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಕ್ವಾಲಿಟಿ ಎಜುಕೇಶನ್ ಸಪೋರ್ಟ್ ಟ್ರಸ್ಟ್ (QUEST), ಒಂದು ಮೂಲೆಯಲ್ಲಿ ಇರಿಸಬಹುದಾದ ಪುಸ್ತಕ್ ಪೆಟಿಸ್, ಪುಸ್ತಕಗಳಿಂದ ತುಂಬಿದ ಸಣ್ಣ ಲೋಹದ ಪೆಟ್ಟಿಗೆಗಳನ್ನು ಹೊಂದಿದೆ.
- ಪುಸ್ತಕಗಳ ಶೀರ್ಷಿಕೆಗಳು ಅಥವಾ ಮುಖಪುಟಗಳು ಗೋಚರಿಸುವಂತೆನೀವು ಸಣ್ಣ ಮರದ ಪೆಟ್ಟಿಗೆ ಅಥವಾ ಸಾಮಾನ್ಯ ಪೆಟ್ಟಿಗೆಯನ್ನು ಇರಿಸಿಕೊಳ್ಳಬಹುದು . ವಿಭಿನ್ನ ಓದುವ ಹಂತಗಳಿಗಾಗಿ ನೀವು ಪೆಟ್ಟಿಗೆಯೊಳಗೆ ವಿವಿಧ ವಿಭಾಗಗಳನ್ನು ರಚಿಸಿಕೊಳ್ಳಬಹುದು (ಚಿತ್ರ 4 ಎ ನೋಡಿ).
- ಪರ್ಯಾಯವಾಗಿ, ನೀವು ನೆಲದ ಮೇಲೆ ಚಾಪೆಯನ್ನು ಹಾಸಬಹುದು, ಪುಸ್ತಕಗಳನ್ನು ಹರಡಬಹುದು ಮತ್ತು ಪ್ರತಿದಿನ ಸ್ವಲ್ಪ ಸಮಯದವರೆಗೆ ಮಕ್ಕಳಿಗೆ ಪುಸ್ತಕಗಳನ್ನು ಓದಲು ಅಥವಾ ಪುಸ್ತಕಗಳ ಮೇಲೆ ಕಣ್ಣಾಡಿಸಲು ಮಾಡಲು ಅನುಮತಿಸಬಹುದು.
- ಮಕ್ಕಳು ಹಗಲಿನ ಯಾವುದೇ ಸಮಯದಲ್ಲಿ ಪುಸ್ತಕಗಳನ್ನು ಓದಬೇಕೆಂದು ನೀವು ಬಯಸಿದರೆ, ಗೋಡೆಯ ಮೇಲೆ ಬಲವಾದ ತಂತಿಗಳನ್ನು ಕಟ್ಟಿಕೊಳ್ಳಿ ಮತ್ತು ಪುಸ್ತಕಗಳನ್ನು ನೇತು ಹಾಕಿ. ಇದರಿಂದ ಪ್ರತಿ ಮಗುವೂ ಅವುಗಳನ್ನು ತೆಗೆದುಕೊಂಡು ಓದಬಹುದು.

[12] ELI's Brief Number 12: Comprehensive Literacy Instruction Model in Indian Classrooms can be accessed here: http://eli.tiss.edu/wp-content/uploads/2017/08/Comprehensive_Literacy_Practitioner_Brief_12_PDF.pdf

ಪುಸ್ತಕಗಳನ್ನು ಜೋಡಿಸಲು ನೀವು ಗೋಡೆ ಯಾರ್ಕ್ ಅನ್ನು ಹೊಂದಿರಬಹುದು. ಆದರೆ ಯಾರ್ಕ್ ನ ಅತಿ ಎತ್ತರದ ಸ್ಥಳವೂ ಮಕ್ಕಳ ಕೈಗೆಟುಕುವಂತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ (ಚಿತ್ರ 4 ಬಿ).




ಚಿತ್ರ: 4 ಎ & ಬಿ ಕಿಷ್ಕಿಂಧಮಯವಾದ .ತರಗತಿ ಕೋಣೆಗಳಲ್ಲಿ, ನೀವು ಪೆಟ್ಟಿಗೆಗಳು, ಮರದ ಪೆಟ್ಟಿಗೆಗಳನ್ನು ಬಳಸಬಹುದು ಮತ್ತು ಪುಸ್ತಕಗಳನ್ನು ನೇತುಹಾಕಬಹುದಾದ ತಂತಿಗಳು ಮತ್ತು ಗೋಡೆಯ ಯಾರ್ಕ್‌ಗಳನ್ನು ಬಳಸಿ ಗ್ರಂಥಾಲಯಗಳನ್ನು ರಚಿಸಬಹುದು .**ಚಿತ್ರಗಳು ಕೃಪೆ** : ಮೃದುಲಾ ಕೋಶಿ, ಟಿಸಿಎಲ್ಪಿ; ರುಚಿ ಧೋನಾ, ಲೆಟ್ಸ್ ಓಪನ್ ದಿ ಬುಕ್.

ಸ್ಥಳದ ನಿರ್ಬಂಧವಿಲ್ಲದಿದ್ದರೆ, ನೀವು ಪುಸ್ತಕ ಪ್ರದರ್ಶನ ಮಾಡಬಹುದು) ಚಿತ್ರ 5 ನೋಡಿ .( ಪುಸ್ತಕ ಪ್ರದರ್ಶನಗಳು ಮಕ್ಕಳ ಸಂಗ್ರಹವನ್ನು ತಿಳಿದುಕೊಳ್ಳಲು ಅನುವು ಮಾಡಿಕೊಡುತ್ತದೆ . ಮಕ್ಕಳು ಮಾಡಿದ ಕೆಲಸಗಳನ್ನು ಪ್ರದರ್ಶಿಸಬಹುದು .ನೀವು ಆಸಕ್ತಿದಾಯಕ ವಿಷಯವನ್ನು ವಿಷಯಾಧಾರಿತವಾಗಿ ಪ್ರದರ್ಶಿಸಬಹುದು - ಒಂದು ನಿರ್ದಿಷ್ಟ ಥೀಮ್ ಅನ್ನು ಆಧರಿಸಿ ಜಾಗರೂಕತೆಯಿಂದ ಆಯ್ಕೆಮಾಡಿದ ಪುಸ್ತಕಗಳು ಮತ್ತು ಥೀಮ್ ಅನ್ನು ಪ್ರತಿನಿಧಿಸುವ ವಸ್ತುಗಳೊಂದಿಗೆ ಜಾಗವನ್ನು ಅಲಂಕರಿಸಬಹುದು.




ಚಿತ್ರ 5. ಮಳೆ) ಎಡ (ಮತ್ತು ರಾತ್ರಿ) ಬಲ (ನಂತಹ ವಿಷಯಗಳ ಮೇಲಿನ ಪ್ರದರ್ಶನ .**ಚಿತ್ರಕೃಪೆ :** ಬುಕ್‌ವರ್ಮ್ ಲೈಬ್ರರಿ, ಗೋವಾ

ನಿಮಗೆ ಮಳೆಯ ಅಥವಾ ನೀರಿನ ಥೀಮ್ ಬೇಕಿದ್ದರೆ, ಈ ಥೀಮ್ ಇರುವ ಅಥವಾ ಈ ಥೀಮ್‌ಗೆ ಪೋಷಕವಾಗಿರುವ ನಿಮ್ಮ ಸಂಗ್ರಹಗಳಲ್ಲಿನ ಎಲ್ಲಾ ಪುಸ್ತಕಗಳನ್ನು ಹೊರತೆಗೆಯಬಹುದು . ಸಮುದ್ರ ಚಿಪ್ಪುಗಳು, ಬೆಣಚುಕಲ್ಲುಗಳು, ಮರಳು ಅಥವಾ ನೀರು ಹರಿಯುವುದಕ್ಕೆ ನೀಲಿ ಅಥವಾ ಹಸಿರು ಬಣ್ಣದಲ್ಲಿನ ಉಡುಪುಗಳನ್ನು ಬಳಸಿ ನೀವು ಪ್ರದರ್ಶನವನ್ನು ಅಲಂಕರಿಸಬಹುದು .ನಿಮ್ಮ ತರಗತಿ ವಿಶಾಲವಾದಜಾಗವನ್ನು ಮತ್ತು ದೊಡ್ಡ ಪುಸ್ತಕಗಳ ಸಂಗ್ರಹವನ್ನು ಹೊಂದಿದ್ದರೆ, ನೀವು ಆಗಾಗ್ಗೆ ಪ್ರದರ್ಶನಗಳನ್ನು ಬದಲಾಯಿಸಬಹುದು . ಸಾಕ್ಷರತೆ, ಭಾಷೆ ಮತ್ತು ಪಠ್ಯಕ್ರಮದ ತರಗತಿಗಳ ಭಾಗವಾಗಿಮಕ್ಕಳು ಮುಖ್ಯವಾಗಿ ಕಥೆಗಳನ್ನು ಅನ್ವೇಷಿಸುವುದರಿಂದ ಅವರಿಗೆ ಇದು ಮೋಜಿನ ಕಲಿಕೆಯ ಅನುಭವವಾಗಬಹುದು.

## ಸಂಗ್ರಹವನ್ನು ಆಯೋಜಿಸುವುದು

***ಪ್ರವೇಶಸಂಖ್ಯೆ ನೀಡಿಕೆ*** .ನಿಮ್ಮ ಸಂಗ್ರಹದ ಪುಸ್ತಕಗಳು ಮತ್ತಓದುವ ಸಾಮಗ್ರಿ ಗಳ ದಾಖಲೆಯನ್ನು ಇಡುವುದು ಒಳ್ಳೆಯದು .ನಿಮ್ಮ ಲೈಬ್ರರಿಯಲ್ಲಿನ ಪುಸ್ತಕಗಳನ್ನು ಪಟ್ಟಿ ಮಾಡಲು ಪ್ರವೇಶ ರಿಜಿಸ್ಟರ್ ಸಹಾಯ ಮಾಡುತ್ತದೆ .ನಿಮ್ಮ ಸಂಗ್ರಹಕ್ಕೆ ಹೊಸ ಪುಸ್ತಕಗಳನ್ನು ಸೇರಿಸುವಾಗ ನೀವು ರಿಜಿಸ್ಟರ್ ಅನ್ನು ನವೀಕರಿಸುತ್ತಿರಬಹುದು .ಯಾವುದೇ ಸಮಯದಲ್ಲಿ, ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ನೀಡುವಾಗ, ಮಗುವಿನ ಹೆಸರಿನ ಮುಂದೆ ರಿಜಿಸ್ಟರ್‌ನಲ್ಲಿ ನಮೂದುಗಳನ್ನು ಮಾಡಲು ಅನುಕೂಲಕರವಾಗಿರುತ್ತದೆ. (ಇದರ ಕುರಿತು ಮುಂದೆ ವಿವರಿಸಲಾಗುವುದು). .ಎರವಲು ಕಾರ್ಡ್‌ಗಳನ್ನು 13ಸಾಕ್ಷರತಾ ಚಟುವಟಿಕೆಯಾಗಿ ಪರಿಚಯಿಸಲು ನೀವುಬಯಸಿದಲ್ಲಿ ಪ್ರವೇಶ ಸಂಖ್ಯೆ ನೀಡಿಕೆ ಸೂಕ್ತವಾದುದು.

ಸಂಗ್ರಹದಲ್ಲಿರುವ ಪ್ರತಿಯೊಂದು ಪುಸ್ತಕದ ವಿವರಗಳನ್ನು ಭರ್ತಿ ಮಾಡಿ .ನಿಮ್ಮಲ್ಲಿರುವ ಮೊದಲ ಪುಸ್ತಕವನ್ನು ನೀವು‘ 1’ ಎಂದು ನಮೂದಿಸಬಹುದು, ಅದರ ನಂತರ ಶೀರ್ಷಿಕೆ, ಲೇಖಕ ಮತ್ತು ಪ್ರಕಾಶಕ ಇತರ ವಿವರಗಳನ್ನು ನಮೂದಿಸಬಹುದು . ನೀವು ನೀಡುವ ಪುಸ್ತಕದ ಸಂಖ್ಯೆ ಅದರ ಪ್ರವೇಶ ಸಂಖ್ಯೆಯಾಗಿರುತ್ತದೆ . ಪ್ರತಿ ಪುಸ್ತಕಕ್ಕೆ ಪ್ರವೇಶ ಸಂಖ್ಯೆಯನ್ನು ನಮೂದಿಸಿ ಮತ್ತು ನೀವು ಶಾಲೆಯ ಸ್ಟ್ಯಾಂಪ್ ಹೊಂದಿದ್ದರೆ, ಪುಸ್ತಕದ ಒಂದು ಬದಿಯಲ್ಲಿ ಮತ್ತು ಪುಸ್ತಕದ ಒಳಗೆ ಒಂದೆರಡು ಸ್ಥಳಗಳಲ್ಲಿ ಸ್ಟ್ಯಾಂಪ್ ಗುರುತು ಮಾಡಿ) ಪಠ್ಯದ ಮೇಲೆ ಅಥವಾ ಚಿತ್ರಗಳ ಮೇಲೆ ಸ್ಟ್ಯಾಂಪ್ ಹಾಕದೆ ಪುಟದ ಒಂದು ಮೂಲೆಯಲ್ಲಿ ಹಾಕಬೇಕು .( ನಿಮ್ಮ ಸಂಗ್ರಹದಲ್ಲಿರುವ ಉಳಿದ ಪುಸ್ತಕಗಳಿಗೂಹೀಗೆಯೇ ಮಾಡಿ

***ವರ್ಗೀಕರಣದ ವ್ಯವಸ್ಥೆ*** .ಓದುವ ಮಟ್ಟ ಮತ್ತು ಪ್ರಕಾರದ ಆಧಾರದ ಮೇಲೆ ಸರಳ ವರ್ಗೀಕರಣ ವ್ಯವಸ್ಥೆಯನ್ನು ಮಾಡಲು ನಾವು ಶಿಫಾರಸು ಮಾಡುತ್ತೇವೆ.

*ಓದುವ ಮಟ್ಟ* .ಕಥೆ ಪುಸ್ತಕಗಳನ್ನು ವ್ಯವಸ್ಥಿತಗೊಳಿಸಲು ಒಂದು ಸರಳ ಮಾರ್ಗವೆಂದರೆ ವಿಭಿನ್ನ ಓದುವ ಹಂತಗಳಿಗೆ ವಿಭಿನ್ನ ಬಣ್ಣಗಳ ಲೇಬಲ್‌ಗಳನ್ನು ಮಾಡುವುದು.

- <u>ಕೆಂಪು.</u> ಇದು ಈಗಷ್ಟೇ ಓದುವುದನ್ನು ಕಲಿಯುತ್ತಿರುವ ಉದಯೋನ್ಮುಖ ಮತ್ತು ಆರಂಭಿಕ ಓದುಗರಿಗಾಗಿ. ಪದರಹಿತ ಚಿತ್ರ ಪುಸ್ತಕಗಳು, ಮತ್ತು ಚಿತ್ರವನ್ನು ಲೇಬಲ್ ಮಾಡುವ ಪದಗಳು ಅಥವಾ ಸರಳ ಪುನರಾವರ್ತಿತ ಪದಗಳೊಂದಿಗಿನ ಚಿತ್ರ ಪುಸ್ತಕಗಳ ಹಿಂಬದಿಯಲ್ಲಿ ಕೆಂಪು ಸ್ಟಿಕ್ಕರ್‌ಗಳನ್ನು ಹಚ್ಚಬಹುದು.
- <u>ಹಳದಿ</u>. ಚಿತ್ರಗಳ ನೆರವಿನಿಂದಲೋ ಅಥವಾ ಚಿತ್ರಗಳ ನೆರವಿಲ್ಲದೆಯೋ ಸರಳ ಪದಗಳನ್ನು ಗುರುತಿಸಬಲ್ಲ, ಅಂತಹ ಪದಗಳನ್ನು ಅರ್ಥ ಮಾಡಿಕೊಳ್ಳಬಲ್ಲ ಓದಿನಲ್ಲಿ ಮೊದಲ ಹೆಜ್ಜೆ ಇರಿಸಿದ ಓದುಗರಿಗೆ. ಸರಳ ವಾಕ್ಯಗಳನ್ನು ಹೊಂದಿರುವ ಚಿತ್ರ ಪುಸ್ತಕಗಳನ್ನು, ಒಂದು ಅಥವಾ ಎರಡು ಸಾಲುಗಳು ಅಥವಾ ಪುಟದಲ್ಲಿ ಕೆಲವೇ ವಾಕ್ಯಗಳನ್ನು ಹೊಂದಿರುವ ಪುಸ್ತಕವನ್ನು ಈ ಹಂತಕ್ಕೆ ಇರಿಸಬಹುದು.

13 Refer to ELI's Practitioner Brief 3, "Promoting Language and Literacy Development through School Libraries" to understand how you could make and use borrowing cards.

- ನೀಲಿ. ದೀರ್ಘ ವಾಕ್ಯಗಳನ್ನು ಆರಾಮವಾಗಿ ಓದುವರಿಗೆ ಮತ್ತು ಪಠ್ಯವು ಏನನ್ನು ತಿಳಿಸುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವಂತಹ ಓದುಗರಿಗೆ ಇದು ಸೂಕ್ತವಾಗಿದೆ. ಚಿತ್ರಗಳಿರುವ ಅಥವಾ ಇಲ್ಲದಿರುವಂತಹ ದೀರ್ಘ ಪುಸ್ತಕಗಳನ್ನು ಇಲ್ಲಿ ವರ್ಗೀಕರಿಸಬಹುದು.

*ಪ್ರಕಾರಗಳು.* ಒಂದು ಸಾಮಾನ್ಯ ತರಗತಿಯ ಗ್ರಂಥಾಲಯವು ಈ ರೀತಿಯ ಪುಸ್ತಕಗಳನ್ನು ಹೊಂದಿರಬೇಕು:

- *ಉಲ್ಲೇಖ ಪುಸ್ತಕಗಳು.* ಎನ್ಸೈಕ್ಲೋಪೀಡಿಯಾಗಳು, ನಿಘಂಟುಗಳು ಮತ್ತು ಅಟ್ಲೇಸ್‌ಗಳಂತಹ ಉಲ್ಲೇಖಿಸಬಹುದಾದಂತಹ ಪುಸ್ತಕಗಳು ಆದರೆ ಎರವಲು ಪಡೆಯಲಾಗದ ಪುಸ್ತಕಗಳು ಇವು.
- *ಮಾಹಿತಿ ಪುಸ್ತಕಗಳು.* ಇವು ಜನರು, ಸ್ಥಳಗಳು ಮತ್ತು ವಸ್ತುಗಳ ಕುರಿತಾದ ಪುಸ್ತಕಗಳಾಗಿವೆ (ಬೇರ್ಡ್, 2012). ಎಲ್ಲಾ ಕಾಲ್ಪನಿಕವಲ್ಲದ ಪುಸ್ತಕಗಳು ಮತ್ತು ಪಠ್ಯಪುಸ್ತಕಗಳು ಇಲ್ಲಿ ಸೇರಿವೆ. ನೀವು ಕಾಲ್ಪನಿಕವಲ್ಲದ ಪುಸ್ತಕಗಳನ್ನು ಜೀವನಚರಿತ್ರೆ / ಆತ್ಮಚರಿತ್ರೆ, ವಿಜ್ಞಾನ, ಸಾಮಾಜಿಕ ವಿಜ್ಞಾನ / ಪರಿಸರ ವಿಜ್ಞಾನ, ಗಣಿತ, ಪ್ರವಾಸ ಕಥೆಗಳು, ಪಾಕವಿಧಾನ ಪುಸ್ತಕಗಳು ಮತ್ತು ಮುಂತಾದವುಗಳಾಗಿ ವರ್ಗೀಕರಿಸಬಹುದು.
- *ಕಾಲ್ಪನಿಕ ಪುಸ್ತಕಗಳು* .ಮಾತಿಲ್ಲದ ಚಿತ್ರ ಪುಸ್ತಕಗಳಿಂದ ಹಿಡಿದು ಚಿತ್ರ ಪುಸ್ತಕಗಳು ಮತ್ತು ಅಧ್ಯಾಯಗಳುಳ್ಳ ಪುಸ್ತಕಗಳವರೆಗಿನ ಎಲ್ಲವು ಕಥಾ ಪುಸ್ತಕಗಳಾಗಿವೆ .ನಿಮ್ಮ ಸಂಗ್ರಹ ಎಷ್ಟು ದೊಡ್ಡದಾಗಿದೆ ಎಂಬುದರ ಆಧಾರದ ಮೇಲೆ, ನೀವು ಕಾದಂಬರಿಯನ್ನು ಚಿತ್ರ ಪುಸ್ತಕ, ಅಧ್ಯಾಯ ಪುಸ್ತಕಗಳು ಮತ್ತು ಮುಂತಾದವುಗಳಾಗಿ ವರ್ಗೀಕರಿಸಬಹುದು.
- ಕಾವ್ಯ: ಈ ಪ್ರಕಾರದ ಅಡಿಯಲ್ಲಿ *ಪ್ರಾಸಪದ್ಯಗಳು*, ಕವನಗಳು ಮತ್ತು ಮುಂತಾದವುಗಳನ್ನು ಇರಿಸಬಹುದು.
- ಪತ್ರಿಕೆಗಳು, ನಿಯತಕಾಲಿಕೆಗಳು, ನಕ್ಷೆಗಳು, ಪೋಸ್ಟರ್‌ಗಳು, ಆಡಿಯೊ-ದೃಶ್ಯ ವಸ್ತುಗಳು ಮತ್ತು ಮುಂತಾದವುಗಳನ್ನು ಸ್ಟಾಕ್‌ನ ಭಾಗವಾಗಿ ಇಡಬಹುದು (ನೀವು ಇವುಗಳಿಗೆ ಸಂಪನ್ಮೂಲಗಳನ್ನು ಹೊಂಷ'ದಿದ್ದರೆ).

## ಗ್ರಂಥಾಲಯವನ್ನು ಯಾರು ನಿರ್ವಹಿಸುತ್ತಾರೆ?

ತರಗತಿಯ ಗ್ರಂಥಾಲಯದ ಮಾಲೀಕತ್ವ ಮತ್ತು ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳುತ್ತಾರೆ ಎಂಬುದನ್ನು ಪರಿಗಣಿಸುವುದು ಮುಖ್ಯ .ಇದು ಪ್ರಾಥಮಿಕ ತರಗತಿ ಶಿಕ್ಷಕರೇ, ಮಕ್ಕಳೇ? ನಿಮ್ಮ ಮಕ್ಕಳ ಪೋಷಕರು ಈ ಹೊಣೆಗಾರಿಕೆಯನ್ನು ನಿಭಾಯಿಸಬಲ್ಲರೇ? ನಿಮ್ಮ ವಿಶೇಷ ತರಗತಿ ಗ್ರಂಥಾಲಯದ ವಿಷಯದಲ್ಲಿ ಶಾಲೆಗೆ ಯಾವುದಾದರೂ ಪಾತ್ರವಿದೆಯೇ? ನಿಮ್ಮ ತರಗತಿಯ ಗ್ರಂಥಾಲಯದ ಒಟ್ಟಾರೆ ನಿರ್ವಹಣೆ, ಹೊಣೆಗಾರಿಕೆ ಮತ್ತು ಸಹಾಯ ಯಾರಿಂದ ಸಿಗಬಹುದೆಂದು ನೀವು ಭಾವಿಸುತ್ತೀರಿ? ಪ್ರಾಥಮಿಕ ತರಗತಿಯ ಗ್ರಂಥಾಲಯವನ್ನು ಸ್ಥಾಪಿಸುವುದನ್ನು ನಾವು ಪರಿಗಣಿಸುತ್ತಿರುವುದರಿಂದ, ತನ್ನ ವಿದ್ಯಾರ್ಥಿಗಳ ಅಗತ್ಯತೆಗಳನ್ನು - ವಿಭಿನ್ನ ಓದುವ ಹಂತಗಳು, ಅವರ ಆಸಕ್ತಿಗಳು, ಅವರ ಭಾಷಾ ಕಲಿಕೆಯ ಅಗತ್ಯಗಳು - .ಅರ್ಥಮಾಡಿಕೊಳ್ಳುವ ಶಿಕ್ಷಕರ ಮೇಲೆ ಜವಾಬ್ದಾರಿ ಹೆಚ್ಚಾಗಿರುತ್ತದೆಆದ್ದರಿಂದ ತರಗತಿಯ ಗ್ರಂಥಾಲಯವನ್ನು ನಿರ್ವಹಿಸುವ ಸಾಮೂಹಿಕ ಜವಾಬ್ದಾರಿಯನ್ನು ತೆಗೆದುಕೊಂಡು ನೀವು ಮಕ್ಕಳಿಗೆ ಸಹಾಯ ಮಾಡುವಂತವರನ್ನು ನಿರೀಕ್ಷಿಸುವುದು ಅತ್ಯಗತ್ಯ.

ನೀವು ಬಯಸಿದಲ್ಲಿ, ತರಗತಿ ಗ್ರಂಥಾಲಯ ಮತ್ತು ಸಂಗ್ರಹಣೆಯ ಮತ್ತು ನಿರ್ವಹಣೆಗೆ ಸಹಾಯ ಮಾಡಲು ಮಕ್ಕಳು ಸರದಿ ಪ್ರಕಾರ ಗ್ರಂಥಾಲಯದ ಪ್ರತಿನಿಧಿಗಳಾಗಬಹುದು .ಪುಸ್ತಕಗಳನ್ನು

ನೋಡಿಕೊಳ್ಳುವುದನ್ನು ಮಕ್ಕಳಿಗೆ ಕಲಿಸಬೇಕು - ಅವುಗಳನ್ನು ಉತ್ತಮ ಸ್ಥಿತಿಯಲ್ಲಿಡುವುದು, ಹರಿದ ಪುಸ್ತಕಗಳನ್ನು ಸರಿಪಡಿಸುವುದು ಮತ್ತು ನೀವು ಸಾಮೂಹಿಕವಾಗಿ ರಚಿಸಿದ ನಿಯಮಗಳ ಪ್ರಕಾರ ಅವುಗಳನ್ನು ಬಳಸುವುದು ಮತ್ತು ಬದಲಾಯಿಸುವುದು ಮುಂತಾದವು . ಪುಸ್ತಕಗಳ ಮೇಲಿನ ನಿಮ್ಮ ಪ್ರೀತಿ ಮತ್ತು ನೀವು ಪ್ರೀತಿಸುವ ವಸುಗಳನ್ನು ಹೇಗೆ ಜೋಪಾನ ಮಾಡುತ್ತೀರಿ ಎಂದು ನೀವು ಅವರೊಂದಿಗೆ ಮಾತನಾಡಬಹುದು .ನಿಮ್ಮ ಪುಸ್ತಕಗಳ ಸಂಗ್ರಹದ ಬಗ್ಗೆ ಹೇಗೆ ಕಾಳಜಿ ವಹಿಸುತ್ತೀರಿ ಎಂಬುದನ್ನು ಅವರಿಗೆ ತೋರಿಸಿ, ಮತ್ತು ಕಾಲಾನಂತರದಲ್ಲಿ ಅವರು ಅನುಸರಿಸುವ ಸಾಧ್ಯತೆಯಿದೆ.




ಚಿತ್ರ 6. ಮಕ್ಕಳು ತಮ್ಮ ತರಗತಿ ಗ್ರಂಥಾಲಯದಲ್ಲಿ ಪುಸ್ತಕಗಳನ್ನು ವೀಕ್ಷಿಸುತ್ತಿದ್ದಾರೆ ಚಿತ್ರಕೃಪೆ:

ರುಚಿ ಧೋನಾ, ಪುಸ್ತಕವನ್ನು ತೆರೆಯೋಣ.

**ಪುಸ್ತಕಗಳನ್ನು ಕೊಡುವುದು**: ತರಗತಿಯ ಗ್ರಂಥಾಲಯದಲ್ಲಿ ಬಹಳ ಸೀಮಿತ ಸಂಗ್ರಹವನ್ನು ಹೊಂದಿರುವ ಪ್ರಾಥಮಿಕ ತರಗತಿಯ ಶಿಕ್ಷಕರಾಗಿ ನೀವು ತೆಗೆದುಕೊಳ್ಳಬೇಕಾದ ಅತ್ಯಂತ ಸವಾಲಿನ ನಿರ್ಧಾರಗಳಲ್ಲಿ ಇದು ಒಂದು .ಅನೇಕ ಶಿಕ್ಷಕರು ತಮ್ಮ ಅಮೂಲ್ಯ ಪುಸ್ತಕಗಳನ್ನು ಮಕ್ಕಳುಮನೆಗೆ ತೆಗೆದುಕೊಂಡು ಹೋಗಲು ಅನುಮತಿ ನೀಡಲು ಹಿಂದೆ ಮುಂದೆ ನೋಡಬಹುದು .ಅವರು ಅವರನ್ನು ಹಿಂದಿರುಗಿಸುತ್ತಾರೆಯೇ? ಅವರು ಅವುಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾರೆಯೇ? ಮೊದಲೇ ಹೇಳಿದಂತೆ, ಸಂಗ್ರಹದ ಸಾಮೂಹಿಕ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು ಮತ್ತು ಪುಸ್ತಕಗಳನ್ನು ಉತ್ತಮ ಸ್ಥಿತಿಯಲ್ಲಿ ನಿರ್ವಹಿಸಬೇಕೆಂದರೆ, ನಾವು ಪ್ರಜಾಪ್ರಭುತ್ವ ಪ್ರಕ್ರಿಯೆಗಳನ್ನು ರೂಢಿಸಿಕೊಳ್ಳಲು ಪ್ರಾರಂಭದಿಂದಲೂ ಪ್ರಯತ್ನಿಸಬೇಕು .ನಿಮ್ಮ ವಿದ್ಯಾರ್ಥಿಗಳು ಪುಸ್ತಕಗಳನ್ನು ನೋಡಿಕೊಳ್ಳುವ ಮತ್ತು ಅವುಗಳನ್ನು ಸುರಕ್ಷಿತವಾಗಿ ಹಿಂದಿರುಗಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಮೊದ ಮೊದಲು ಸಿದ್ಧರಿಲ್ಲವಾದರೂ , ನೀವು ಮೊದಲ ಬಾರಿ ನಿಮ್ಮ ತರಗತಿಯ ಗ್ರಂಥಾಲಯವನ್ನು ಪ್ರಾರಂಭಿಸಿದಾಗ, ನೀವು ಅವರೊಂದಿಗೆ ಹೇಗೆ ಸಂವಹನ ನಡೆಸುತ್ತೀರಿ ಮತ್ತು ಅವರಿಗೆ ತರಗತಿಯ ಮೌಲ್ಯವನ್ನು ಅರ್ಥಮಾಡಿಕೊಳ್ಳಲು ಹೇಗೆ ಸಹಾಯ ಮಾಡುವಿರಿ, ಅವರಿಗೆ ಪುಸ್ತಕಗಳ ಬಗ್ಗೆ ಜವಾಬ್ದಾರಿ ಮತ್ತು ಪ್ರೀತಿಯನ್ನು ಬೆಳೆಸಲು ಸ್ವಲ್ಪ ಹೆಚ್ಚು ಸಮಯ ತೆಗೆದುಕೊಳ್ಳಬಹುದು . ನಿಮ್ಮ ವಿದ್ಯಾರ್ಥಿಗಳನ್ನು ಪುಸ್ತಕ ತೆಗೆದುಕೊಂಡು ಹೋಗುವ ವ್ಯವಸ್ಥೆಗೆ ಸಂಬಂಧಿಸಿದ ಚರ್ಚೆಗಳ ಭಾಗವಾಗಿಸಬಹುದು ಮತ್ತು ನ್ಯಾಯಯುತ ಮತ್ತು ಅನುಸರಿಸಲು ಸುಲಭವಾದ ವ್ಯವಸ್ಥೆಯನ್ನು ನೀವು ತರಬಹುದು.

*ಪುಸ್ತಕಗಳನ್ನು ನೀಡುವ ಪ್ರಕ್ರಿಯೆ* .ನಿಮ್ಮ ತರಗತಿಯಲ್ಲಿ ನೀವು ತಕ್ಷಣವೇ ಬಳಸಬಹುದಾದ ಅತ್ಯಂತ ತಡೆರಹಿತ ವಿಧಾನವೆಂದರೆ ನೀವು ಎಲ್ಲಾ ಪುಸ್ತಕಗಳಿಗೆ ಪ್ರವೇಶ ಸಂಖ್ಯೆಗಳನ್ನು ನಿಗದಿಪಡಿಸಿ, ತರಗತಿ ಗ್ರಂಥಾಲಯ ರಿಜಿಸ್ಟರ್ ಅನ್ನು ಬಳಸುವುದು .ವಾರಕ್ಕೆ ಪ್ರತಿ ಮಗುವಿಗೆ ಒಂದು ಪುಸ್ತಕವನ್ನು ನೀಡಬಹುದು .ನಿಮಗೆ ದೊಡ್ಡ ನೋಟ್ ಪುಸ್ತಕ ಬೇಕಾಗುತ್ತದೆ .ಜೋಡಿ ಪುಟದಿಂದ ಪ್ರಾರಂಭಿಸಿ .ಮೇಲ್ಭಾಗದಲ್ಲಿ ತಿಂಗಳ ಹೆಸರನ್ನು ಬರೆಯಿರಿ .ಇದನ್ನು 5 ರಿಂದ 6 ಕಾಲಮ್‌ಗಳಾಗಿ ಮಾಡಿ . ಮೊದ ಕಾಲಂ ನಿಮ್ಮ ತರಗತಿಯ ವಿದ್ಯಾರ್ಥಿಗಳ ಹೆಸರನ್ನು ಹೊಂದಿರುತ್ತದೆ .ಮೊದಲ ಸಾಲಿನಲ್ಲಿರುವ ಉಳಿದ ಕಾಲಮ್‌ಗಳು ಪುಸ್ತಕವನ್ನು ನೀಡಿದ ದಿನಾಂಕಗಳನ್ನು ಹೊಂದಿರುತ್ತವೆ) ಉದಾ .ನೀವು ಪುಸ್ತಕವನ್ನು ನೀಡುವುದು ವಾರದ ಪ್ರತಿ ಶುಕ್ರವಾರ ಆಗಿರಬಹುದು .(ಪ್ರತಿ ಮಗುವಿನ ಹೆಸರಿನ ಮುಂದೆ ಮತ್ತು ಉಳಿದ ಸಾಲುಗಳ ಅಂಕಣಗಳಲ್ಲಿ, ಆ ವಾರ ಎರವಲು ಪಡೆದ ಪುಸ್ತಕದ ಪ್ರವೇಶ ಸಂಖ್ಯೆಯನ್ನು ನೀವು ನಮೂದಿಸುತ್ತೀರಿ .ಪುಸ್ತಕವನ್ನು ಹಿಂದಿರುಗಿಸಿದ ನಂತರ, ನೀವು ಮಗುವಿನ ಹೆಸರಿನ ಮುಂದೆ ಪ್ರವೇಶ ಸಂಖ್ಯೆಯನ್ನು ಅಳಿಸಿ ಹಾಕುತ್ತೀರಿ .ಒಂದು ವೇಳೆ ಮಗು ಪುಸ್ತಕವನ್ನು ಹಿಂತಿರುಗಿಸದಿದ್ದಲ್ಲಿ, ಪ್ರವೇಶದ ಸಂಖ್ಯೆ ಪುಸ್ತಕವು ಬಾಕಿ ಇದೆ ಎಂದು ಗುರುತಿಸಲು ನಿಮಗೆ ಸಹಾಯ ಮಾಡುತ್ತದೆ .ರಿಜಿಸ್ಟರ್ ಹೇಗೆ ಕಾಣುತ್ತದೆ ಎಂಬುದಕ್ಕೆ ಕೆಳಗೆ ಒಂದು ಉದಾಹರಣೆಯನ್ನು ನೀಡಲಾಗಿದೆ.

| 2019 ಜೂನ್ | | | | | |
|---|---|---|---|---|---|
| ಹೆಸರು | 07/06 | 14/06 | 21/06 | 28/06 | |
| ಆದಿತ್ಯ | ಪ್ರವೇಶ ಸಂಖ್ಯೆ | | | | |
| ಅನನ್ಯ | ಪ್ರವೇಶ ಸಂಖ್ಯೆ | | | | |
| ಬಿಂದು | ಪ್ರವೇಶ ಸಂಖ್ಯೆ | | | | |
| ಚೈತ್ರ | ಪ್ರವೇಶ ಸಂಖ್ಯೆ | | | | |
| ದೇವ | ಪ್ರವೇಶ ಸಂಖ್ಯೆ | | | | |

**ಸಾರಾಂಶ**

ಒಮ್ಮೆ ನಾವು ತರಗತಿಯ ಗ್ರಂಥಾಲಯವನ್ನು ಸ್ಥಾಪಿಸಿದಾಗ ಮತ್ತು ಅದನ್ನು ನಿಯಮಿತವಾಗಿ ಮತ್ತು ಪರಿಣಾಮಕಾರಿಯಾಗಿ ಬಳಸುವ ವ್ಯವಸ್ಥೆಯನ್ನು ಯೋಚಿಸಿದಾಗ, ನಮ್ಮ ಮಕ್ಕಳಲ್ಲಿ ಪುಸ್ತಕಗಳ ಮೇಲಿನ ಮತ್ತು ಓದುವಿಕೆಯ ಮೇಲಿನ ಪ್ರೀತಿಯನ್ನು ಬೆಳೆಸುವಲ್ಲಿ ಈ ಸಣ್ಣ ಸೇರ್ಪಡೆಯಿಂದ ಉಂಟಾಗುವ ಸಕಾರಾತ್ಮಕ ಪರಿಣಾಮಗಳನ್ನು ನಾವು ಶೀಘ್ರದಲ್ಲೇ ನೋಡಲು ಸಾಧ್ಯವಾಗುತ್ತದೆ .ಪುಸ್ತಕಗಳ ಉಪಸ್ಥಿತಿಯನ್ನು ಮೆಚ್ಚುವ ಮತ್ತು ಗೌರವಿಸುವ , ಹೆಚ್ಚು ಸಂತೋಷದಾಯಕ ಮತ್ತು ವ್ಯವಸ್ಥಿತವಾದ ಓದುವ ಮತ್ತು ಬರೆಯುವ ಪ್ರಕ್ರಿಯೆಯನ್ನು ಒಂದೇ ಸಮಯದಲ್ಲಿ ತೆಗೆದುಕೊಂಡು ಹೋಗಲು ಅಥವಾ ಕಲಿಕೆಯನ್ನು ಅಭಿವೃದ್ಧಿಪಡಿಸಲು ಇದು ಮೊದಲ ಹೆಜ್ಜೆಯಾಗಿರಬಹುದು . ಶಿಕ್ಷಕರಾಗಿ, ನಿಮ್ಮ ಬೋಧನೆಗೆ ತರಗತಿಯ ಗ್ರಂಥಾಲಯ ಎಷ್ಟು ದೊಡ್ಡ ಸಂಪನ್ಮೂಲವಾಗಿದೆ ಎಂಬುದನ್ನು ನೀವು ಗಮನಿಸಬಹುದು ! ವಿಶೇಷವಾಗಿ ಮನೆಯಲ್ಲಿ ಪುಸ್ತಕಗಳಿಂದ ಸುತ್ತುವರೆದ ಶ್ರೀಮಂತ ವಾತವರಣವಿದ್ದರೆ !ಮಕ್ಕಳೂ ಸಹ ಹೆಚ್ಚಿನ ಪ್ರಯೋಜನವನ್ನು ಪಡೆಯುತ್ತಾರೆ.

## References

Baird, N (2012). *Setting up and running a school library*. Portsmouth, NH: Heinemann.

Galda, L. (1998). Mirrors and windows: Reading as transformation. In T.E. Raphael & K.H. Au (Eds.), *Literature based instruction: Reshaping the curriculum* (pp. 1–11). Norwood, MA: Christopher-Gordon.

Mukunda, U (2015).*Guide to setting up an open library in primary schools*. Retrieved from: https://cfl.in/wp-content/uploads/2010/07/Manual.pdf

Mills, W (2011). Identifying key components of successful libraries and librarians. *Bookbird: A Journal of International Children's Literature,* 49(1), 53-62.

Neuman, B. S. (2001). The importance of the classroom library. *Early Childhood Today*, Vol. 1(5), p. 12.

**Author**: Harshita V. Das

**Conceptual Support and Editing**: Shailaja Menon

**Copy Editing**: Chetana Divya Vasudev

**Layout and Design**: Harshita V. Das

The author would like to acknowledge the support of the following persons:
Keerti Jayaram (OELP, Rajasthan), Thejaswi Shivanand, Deepali Pitre Correya (Bookworm, Goa)

© 2019 by Early Literacy Initiative, Tata Institute of Social Sciences, Hyderabad. This work is licensed under a Creative Commons Attribution-ShareAlike 4.0 International

License: https://creativecommons.org/licenses/by-sa/4.0/